ನವೆಂಬರ್ 2022 ಸಂಪುಟ 18
ಸಂಚಿಕೆ 11
ಸಂಚಿಕೆ ಬೆಲೆ ರೂ. 1/-

ಬಂಟರ ಸಂಘ ಬೆಂಗಳೂರು
BUNTS' SANGHA BANGALORE
www.buntsanghablr.com

# ಸ್ನೇಹ ಚಿಂತನ

ಮಾಸ ಪತ್ರಿಕೆ




ದೀಪಾವಳಿ ಸಂಭ್ರಮ




ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ –
ಕನ್ನಡ ರಾಜ್ಯೋತ್ಸವ ಆಚರಣೆ



ವೈದ್ಯಕೀಯ ವಿಭಾಗ –
ವೈದ್ಯಕೀಯ ಅರಿವು ಕಾರ್ಯಕ್ರಮ



324, Chord Road, Vijayanagara
Bengaluru - 560 040.
Ph: 080 2339 9323/ 2339 9635
E: info@buntsanghablr.com

# BUNTS SANGHA
# R.N.S. VIDYANIKETAN
# GOVERNING COUNCIL



**Sri K. Prakash Shetty**
Chairman



**Sri M. Muralidhar Hegde**
President



**Sri B. Anandram Shetty**
Convenor



**Sri Amarnath Shetty**
Treasurer

## Members



**Dr. Ramananda Shetty S.**
Former Vice Chancellor,
RGUHS



**Sri Satish R. Shetty**
Chairman & Managing Director
Murudeshwar Ceramics Limited



**Sri A.N. Shetty**
Tax Consultant



**Dr. Meera Krishnappa**
Educational Consultant



**Sri R. Upendra Shetty**
Chairman,
Universal Group of Institution



**Dr. Vibha A. Shetty**
Senior Professor
Ramaiah University

# ಸ್ನೇಹ ಚಿಂತನೆ

*Monthly Magazine Published by*
**BUNTS' SANGHA BANGALORE**

**VOL 18** | **NOVEMBER 2022** | **ISSUE 11**

**ಸಾಹಿತ್ಯ ಮತ್ತು ಪ್ರಕಾಶನ ಸಮಿತಿ**
ಚೇರ್‌ಪರ್ಸನ್ ಮತ್ತು ಗೌ॥ ಸಂಪಾದಕರು :
ಶ್ರೀ ಅರವಿಂದ ಶೆಟ್ಟಿ ಎಂ.

**ಸಲಹಾ ಮಂಡಳಿ :**
ಶ್ರೀ ಸತ್ಯಾನಂದ ಮೇಲಾಂಟ ಎನ್.

**ಸಂಪಾದಕ ಮಂಡಳಿ :**
ಶ್ರೀ ಸತೀಶ್ ಶೆಟ್ಟಿ ವಕ್ವಾಡಿ
ಶ್ರೀಮತಿ ಜಯಲಕ್ಷ್ಮೀ ಸಿ. ಶೆಟ್ಟಿ
ಶ್ರೀಮತಿ ಶ್ಯಾಮಲ ಶೆಟ್ಟಿ
ಶ್ರೀಮತಿ ನಿರ್ಮಲಾ ಸಿ. ರೈ
ಶ್ರೀ ಡಾ। ಶಾಲ್ಮಲೀ ಸುರೇಶ್
ಶ್ರೀ ರವೀಂದ್ರ ಶೆಟ್ಟಿ ಹಟ್ಟಿಯಂಗಡಿ
ಶ್ರೀಮತಿ ಆರತಿ ಸುರೇಶ್ ಶೆಟ್ಟಿ
ಶ್ರೀಮತಿ ಅನುಷಾ ಶೆಟ್ಟಿ
ಶ್ರೀ ಪ್ರದೀಪ್ ಕುಮಾರ್ ಹೆಗ್ಡೆ
ಶ್ರೀ ಜಯರಾಮ ಶೆಟ್ಟಿ, ನೂಜಾಡಿ
ಶ್ರೀ ಪ್ರಕಾಶ್ ರೈ
ಶ್ರೀ ಪ್ರದೀಪ್‌ರಾಜ್ ಶೆಟ್ಟಿ

**ಪೋಷಕ ಸದಸ್ಯರು :**
ಶ್ರೀಮತಿ ಮನೋರಮ ಚೌಟ
ಶ್ರೀಮತಿ ವೇದ ಎಸ್. ಶೆಟ್ಟಿ
ಶ್ರೀ ಬಿ. ಕುಸುಮಾಕರ ಶೆಟ್ಟಿ
ಶ್ರೀ ಆರ್.ಎಸ್. ಶೆಟ್ಟಿ
ಶ್ರೀಮತಿ ವಸಂತಿ ಪಿ. ಶೆಟ್ಟಿ
ಶ್ರೀ ಪ್ರಕಾಶ್ ಶೆಟ್ಟಿ
ಶ್ರೀ ಎ.ಜೆ. ಶೆಟ್ಟಿ
ಶ್ರೀಮತಿ ಗೀತ ಭಗವಾನ್‌ದಾಸ್ ರೈ
ಶ್ರೀ ಕೆ. ಶಂಕರ್ ಶೆಟ್ಟಿ ಹುಬ್ಬಳ್ಳಿ
ಶ್ರೀ ಶ್ರೀನಿವಾಸ ಸೂಡ

**ಪ್ರಕಾಶಕರು :**
ಶ್ರೀ ಆನಂದರಾಮ ಶೆಟ್ಟಿ ಬಿ.

ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ. – **ಸಂಪಾದಕ ಮಂಡಳಿ**

## ಒಳ ಪುಟಗಳಲ್ಲಿ.....

| | **ಪುಟ** |
|---|---|
| ಸಂಪಾದಕೀಯ | 2 |
| ಅಧ್ಯಕ್ಷರ ಮಾತು | 3 |
| ಗೌರವ ಕಾರ್ಯದರ್ಶಿಗಳ ವರದಿ | 4 |
| ಕ್ರೀಡಾ ವಿಭಾಗ | 5 |
| ಸಾಂಸ್ಕೃತಿಕ ವಿಭಾಗ | 6 |
| Investiture Ceremony 2022- 23 | 10 |
| ದೀಪಾವಳಿ ಸಂಭ್ರಮ | 12 |
| ವೈದ್ಯಕೀಯ ಮತ್ತು ವಿಮೆ ವಿಭಾಗ | 19 |
| ವಿಶ್ವಭಾರತಿಗೆ ಕನ್ನಡದಾರತಿ | 20 |
| Childhood Of Old Age | 24 |
| ಮೌನ, ಧ್ಯಾನ, ವ್ಯವಧಾನ | 26 |
| Durga Pujo In Kolkotta | 27 |
| ಮಹಿಳಾ ವಿಭಾಗ – ದಸರಾ ಆಚರಣೆ | 31 |
| ಕಾಲಾತೀತ ಅತ್ಯಂತ ಪವಿತ್ರ ರಾಜರಾಜೇಶ್ವರ ದೇವಾಲಯ | 33 |

**ಮುಖ ಪುಟ**

ದೀಪಾವಳಿ ಸಂಭ್ರಮ
ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ –
ಕನ್ನಡ ರಾಜ್ಯೋತ್ಸವ ಆಚರಣೆ
ವೈದ್ಯಕೀಯ ವಿಭಾಗ – ವೈದ್ಯಕೀಯ ಅರಿವು ಕಾರ್ಯಕ್ರಮ

# ಸಂಪಾದಕೀಯ



**ಕರ್ಮಣ್ಯೇ ವಾಧಿಕಾರಸ್ತೆ ಮಾಫಲೇಷು ಕದಾಚನ**

ನೀನು ನಿನ್ನ ಕರ್ಮ (ಕರ್ತವ್ಯ)ವನ್ನು ಅರಿತು, ಶ್ರದ್ಧೆ, ಪ್ರಾಮಾಣಿಕತೆಯಿಂದ ಮಾಡು. ಯಾವ ಪ್ರತಿಫಲಾಪೇಕ್ಷೆಯು ಇಲ್ಲದೇ ನಿಷ್ಠೆಯಿಂದ ಮಾಡುವ ಕರ್ಮಗಳಿಗೆ ಸರಿಯಾದ ಪ್ರತಿಫಲ ಸಿಗುತ್ತದೆ. ಇದು ಶ್ರೀ ಕೃಷ್ಣ ಹೇಳಿದ ಗೀತಾ ಸಂದೇಶದ ಒಂದು ಸಾಲು.

ನಾವು ಸಕರ್ಮಗಳನ್ನು ಮಾಡಿದರೆ ಅದರ ಫಲ ಸವಿಯಾಗಿರುತ್ತದೆ. ಅದೇ ರೀತಿ ನಾವು ಮಾಡುವ ಕೆಟ್ಟ ಕೆಲಸಗಳಿಗೆ ಕೆಟ್ಟ ಫಲಗಳನ್ನು ಕರುಣಿಸುತ್ತದೆ. ನಾವು ಪ್ರಪಂಚಕ್ಕೆ ಏನು ನೀಡುತ್ತೇವೋ ಅದನ್ನೇ ಪಡೆಯುತ್ತೇವೆ. ಅದು ಪ್ರೀತಿ, ಕರುಣೆ, ಪ್ರಾಮಾಣಿಕತೆ, ದ್ವೇಷ, ಅಸೂಯೆ, ಮೋಸ, ಕ್ರೌರ್ಯ ಯಾವುದಾದರೂ ಸರಿ. "ನಾಯಿ-ನೆರಳು" ಕಾದಂಬರಿಯಲ್ಲಿ ಎಸ್.ಎಲ್. ಬೈರಪ್ಪರವರು ನಾವು ಮಾಡಿದ ಪೂರ್ವ ಜನ್ಮದ, ಈ ಜನ್ಮದ ಕರ್ಮಗಳು ಹೇಗೆ ನಾಯಿಯಂತೆ ನೆರಳಾಗಿ ನಮ್ಮನ್ನು ಹಿಂಬಾಲಿಸುತ್ತವೆ ಎನ್ನುವುದನ್ನು ಅರ್ಥಪೂರ್ಣವಾಗಿ ವಿವರಿಸುತ್ತಾರೆ. ಈ ಕರ್ಮಫಲಗಳ ಬಗ್ಗೆ ಒಮ್ಮೆ ಓದಿದ ಕಥೆ ನೆನಪಾಗುತ್ತದೆ.

ಒಂದಾನೊಂದು ಕಾಲದಲ್ಲಿ ಒಬ್ಬ ಜನಾನುರಾಗಿ ರಾಜನಿದ್ದ. ರಾಜ್ಯದ ಪ್ರತಿಯೊಬ್ಬರನ್ನೂ ಗೌರವಾದರಗಳಿಂದ ಕಾಣುತ್ತಿದ್ದ. ಆತ ಒಂದು ಆಚರಣೆಗೆ ಬದ್ಧನಾಗಿದ್ದ. ಪ್ರತಿದಿನ ಊಟಕ್ಕೆ ಮೊದಲು ಒಬ್ಬ ಬ್ರಾಹ್ಮಣನಿಗೆ ಪ್ರಸಾದ ನೀಡಿದ ಮೇಲೆ ತಾನೂ ಸಂತೃಪ್ತನಾಗಿ ಆಹಾರ ಸೇವಿಸುತ್ತಿದ್ದ. ಹೀಗೆ ಒಮ್ಮೆ ರಾಜಭಟರು ಓರ್ವ ಬ್ರಾಹ್ಮಣನಿಗೆ ಪ್ರಸಾದ ಕೊಡಲು ರಾಜಬೀದಿಯಲ್ಲಿ ಸಾಗುತ್ತಿದ್ದಾಗ, ಬಾನಿನಲ್ಲಿ ಒಂದು ಹದ್ದು ವಿಷದ ಹಾವನ್ನು ಕಚ್ಚಿಕೊಂಡು ಹಾರುತ್ತಿತ್ತು. ಆ ಹಾವಿನ ಬಾಯಿಯಿಂದ ಒಂದು ವಿಷದ ಹನಿ ರಾಜಭಟರ ಕೈಯಲ್ಲಿದ್ದ ಪ್ರಸಾದಕ್ಕೆ ಬಿದ್ದು ಪ್ರಸಾದ ವಿಷಮಯವಾಗುತ್ತದೆ. ಇದರ ಅರಿವಿರದ ರಾಜಭಟರು ಬ್ರಾಹ್ಮಣನಿಗೆ ನೀಡಿದ ಕೆಲವೇ ಕ್ಷಣಗಳಲ್ಲಿ ಬ್ರಾಹ್ಮಣನು ಅಸುನೀಗುತ್ತಾನೆ. ಈ ವಿಷಯ ತಿಳಿದ ರಾಜನಿಗೆ ವಿಷಾದವಾಗುತ್ತದೆ. ಇವುಗಳನ್ನೆಲ್ಲ ಗಮನಿಸುತ್ತಿದ್ದ ಚಿತ್ರಗುಪ್ತ ಯಮ ಧರ್ಮರಾಜನಲ್ಲಿ ಹೋಗಿ ಕೇಳುತ್ತಾನೆ "ಯಮರಾಜ ಈ ಸಾವಿನ ಹೊಣೆಯನ್ನು ಯಾರ ತಲೆಗೆ ಕಟ್ಟಬೇಕು? ಒಳ್ಳೆಯ ಮನಸ್ಸಿನಿಂದ ಪ್ರಸಾದ ಕೊಡುತ್ತಿದ್ದ ರಾಜನಿಗೋ? ಅದನ್ನು ಬ್ರಾಹ್ಮಣನಿಗೆ ತಲುಪಿಸಿದ ಭಟರಿಗೋ? ಹಾವನ್ನು ಕಚ್ಚಿಕೊಂಡು ಹೋಗುತ್ತಿದ್ದ ಹದ್ದಿಗೋ? ಇಲ್ಲ ವಿಷಪೂರಿತ ಹಾವಿಗೋ? ಎಂದು ಕೇಳುತ್ತಾನೆ. ಆಗ ಯಮನು ಸ್ವಲ್ಪ ಸಮಯ ಕಾದು ನೋಡುವಂತೆ ಸೂಚಿಸುತ್ತಾನೆ. ಹೀಗೆ ಕೆಲವು ದಿನಗಳ ಬಳಿಕ ಬೇರೆ ರಾಜ್ಯದಿಂದ ಕೆಲವು ಬ್ರಾಹ್ಮಣರು ರಾಜನನ್ನು ಭೇಟಿಯಾಗಲು ಈ ರಾಜ್ಯಕ್ಕೆ ಆಗಮಿಸುತ್ತಾರೆ. ಅಲ್ಲೇ ಕುಳಿತ್ತಿದ್ದ ಓರ್ವ ಹೆಂಗಸಿನ ಬಳಿ ಅರಮನೆಯ ದಾರಿ ತೋರಿಸುವಂತೆ ಕೇಳುತ್ತಾರೆ. ಆಕೆ ದಾರಿ ತೋರಿಸಿದ ಬಳಿಕ ಪಕ್ಕಕ್ಕೆ ಕರೆದು ಗುಟ್ಟಿನಲ್ಲಿ ಹೇಳುತ್ತಾಳೆ, ನೋಡಿ ಈ ರಾಜ ತುಂಬಾ ಕ್ರೂರಿ, ಬ್ರಾಹ್ಮಣರನ್ನು ಸಾಯಿಸುತ್ತಾನೆ. ಇತ್ತೀಚೆಗಷ್ಟೆ ವಿಷ ಹಾಕಿದ ಪ್ರಸಾದ ನೀಡಿ ಒಬ್ಬ ಬ್ರಾಹ್ಮಣನನ್ನು ಸಾಯಿಸಿದ್ದಾನೆ. ನೀವು ಅಲ್ಲಿಗೆ ಹೋಗದಿರುವುದೇ ಲೇಸು ಎಂದು ಹೇಳುತ್ತಾಳೆ. ಕೂಡಲೇ ಯಮಧರ್ಮನು ಚಿತ್ರಗುಪ್ತನಿಗೆ ಹೇಳುತ್ತಾನೆ, ಹೋಗು, ಇವಳಿಗೆ ಕಟ್ಟು ಆ ಬ್ರಾಹ್ಮಣನ ಸಾವಿನ ಪಾಪದ ಹೊರೆಯನ್ನು ಎಂದು. ಈ ಸಂದರ್ಭದಲ್ಲಿ ಬರುವ ರಾಜ, ಭಟರು, ಹದ್ದು, ಹಾವು ಎಲ್ಲರೂ ತಮ್ಮ ತಮ್ಮ ಕಾರ್ಯದಲ್ಲಿ ತೊಡಗಿದ್ದು ಅವರಿಗೆ ಅರಿಯದೇ ತಪ್ಪು ನಡೆದು ಹೋಗಿದೆ. ಆದರೆ ಅವರ ಉದ್ದೇಶ ಕೆಟ್ಟದ್ದಾಗಿರಲಿಲ್ಲ. ಆದರೆ ಆ ಹೆಂಗಸು ಪ್ರತ್ಯಕ್ಷವಾಗಿ ನೋಡದೇ ಇನ್ನೊಬ್ಬರನ್ನು ದೂಷಿಸುವುದು ಸರಿಯಲ್ಲ. ಆದ್ದರಿಂದ "ಮಾಡಿದ ಪಾಪ ಆಡಿದವರ ಬಾಯಲ್ಲಿ" ಎನ್ನುವುದು.

ಗೀತೆಯಲ್ಲಿ ಶ್ರೀ ಕೃಷ್ಣ ಹೇಳುತ್ತಾನೆ, ಯಾರ ಪಾಪವನ್ನು ನೀನು ತೆಗೆದುಕೊಳ್ಳಲು ಬರುವುದಿಲ್ಲ ಹಾಗೂ ಇನ್ನೊಬ್ಬರ ಪುಣ್ಯ ನಮಗೆ ಸಿಗುವುದಿಲ್ಲ. ನಾವು ಏನು ಅನುಭವಿಸುತ್ತೇವೆ ಅದು ನಾವೇ ಮಾಡಿದ ಕರ್ಮಫಲ ಎಂದು. ಆದ್ದರಿಂದ ಜೀವನದಲ್ಲಿ ಸಚಿಂತನೆ, ಸಕಾರ್ಯಗಳಂತಹ ಸಕಾರಾತ್ಮಕ ಗುಣಗಳನ್ನು ಮೈಗೂಡಿಸಿಕೊಂಡು ಸನ್ಮಾರ್ಗದಲ್ಲಿ ನಡೆಯೋಣ.

**ಅರವಿಂದ ಶೆಟ್ಟಿ ಎಂ.**

# ಅಧ್ಯಕ್ಷರ ಮಾತು



**ಸಮಸ್ತ ಸದಸ್ಯ ಬಾಂಧವರಿಗೆ ಕನ್ನಡ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು**

ದೀಪಾವಳಿ ಸಂಭ್ರಮ ಮುಗಿದಿದೆ, ಅದ್ಧೂರಿಯ ಕಾರ್ಯಕ್ರಮವೂ ಬೆಂಗಳೂರು ಬಂಟರ ಸಂಘದಲ್ಲಿ ಜರುಗಿದೆ. ಶ್ರೀಮತಿ ಜಯಶ್ರೀ ಸಿ. ರೈಯವರು ಚೇರ್‌ಪರ್ಸನ್‌ರಾಗಿ, ಶ್ರೀ ಮಹೇಶ್ ಶೆಟ್ಟಿ ಬೈಲೂರುರವರು ಸಂಚಾಲಕರಾಗಿ, ಸಂಘದ ಸಾಂಸ್ಕೃತಿಕ ವಿಭಾಗದಿಂದ ನಡೆದ ದೀಪಾವಳಿ ಕಾರ್ಯಕ್ರಮ ಬಹಳ ಅದ್ಧೂರಿಯಾಗಿ ಮೂಡಿಬಂತು. ದನದ ಕೊಟ್ಟಿಗೆ, ದೈವದ ಮನೆ, ತುಳಸಿ ಕಟ್ಟೆ ಹಾಗೂ ದೀಪಾವಳಿ ಆಚರಣೆಯ ಇತರ ರೀತಿ ನೀತಿಗಳನ್ನು ಬಿಂಬಿಸುವ ಪರಿಯನ್ನು ಎಲ್ಲರೂ ಶ್ಲಾಘಿಸಿದರು. ಸಂಘದ ಸದಸ್ಯರನ್ನೊಳಗೊಂಡ ಸಾಂಸ್ಕೃತಿಕ ಕಾರ್ಯಕ್ರಮಗಳು ಮನಮೋಹಕವಾಗಿತ್ತು. ಸಾಂಸ್ಕೃತಿಕ ವಿಭಾಗದ ಎಲ್ಲಾ ಸದಸ್ಯರಿಗೂ, ಭಾಗವಹಿಸಿದ ಸಂಘದ ಸದಸ್ಯರೆಲ್ಲರಿಗೂ, ಕಾರ್ಯಕ್ರಮಕ್ಕೆ ಪ್ರಾಯೋಜಕರಾಗಿ ಧನಸಹಾಯ ಮಾಡಿದವರಿಗೆಲ್ಲರಿಗೂ ನಮ್ರತೆಯ ಅಭಿನಂದನೆಗಳು.

ದೀಪಾವಳಿ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ ನಿಟ್ಟೆ ಡೀಮ್ಡ್ ಯೂನಿವರ್ಸಿಟಿಯ ಕುಲಪತಿಗಳಾದ ಸನ್ಮಾನ್ಯ ಡಾ. ವಿನಯ ಹೆಗ್ಡೆಯವರಿಗೆ, ದಿ. ಶ್ರೀನಿವಾಸ ಆಳ್ವ ಪ್ರಶಸ್ತಿ ಸ್ವೀಕರಿಸಿದ ಸನ್ಮಾನ್ಯ ಶ್ರೀ ಅಪ್ಪಣ್ಣ ಹೆಗ್ಡೆಯವರಿಗೆ ಮತ್ತು ಗೌರವ ಅತಿಥಿಗಳಾದ ಖ್ಯಾತ ಹೃದ್ರೋಗ ತಜ್ಞರಾದ ಡಾ. ಶ್ರೀಕಾಂತ್ ಬಿ. ಶೆಟ್ಟಿಯವರಿಗೆ ಹಾಗೂ ಗೌರವ ಸ್ವೀಕರಿಸಿದ ಸಂಘದ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿಯವರಿಗೂ ತುಂಬು ಹೃದಯದ ಧನ್ಯವಾದಗಳು.

ಎಲ್ಲಾ ಉಪಸಮಿತಿಗಳು ಸಂಘದಲ್ಲಿ ಸಭೆಗಳನ್ನು ನಡೆಸಿ ಮುಂದಿನ ಕಾರ್ಯಕ್ರಮಗಳ ತಯಾರಿಯಲ್ಲಿರುವುದು ಸಂತೋಷದ ವಿಚಾರ. ಉಪಸಮಿತಿಗಳ ಸಭೆಗಳಲ್ಲಿ ಸದಸ್ಯರ ವಿಚಾರ ವಿನಿಮಯಗಳು ತುಂಬಾ ಸ್ವಾರಸ್ಯಕರ, ಅರ್ಥಪೂರ್ಣವಾಗಿರುವುದು ಸಂಘದ ಹಿತದೃಷ್ಟಿಯಿಂದ ಉತ್ತಮ ಬೆಳವಣಿಗೆಯಾಗಿದೆ. ಎಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರಿಗೂ ಹಾಗೂ ಪದಾಧಿಕಾರಿಗಳಿಗೂ ತುಂಬು ಹೃದಯದ ಅಭಿನಂದನೆಗಳು. ಕ್ರೀಡಾ ಸಮಿತಿಯಿಂದ ವಿವಿಧ ಕ್ರೀಡಾ ಸ್ಪರ್ಧೆಗಳು ಈಗಾಗಲೇ ಪ್ರಾರಂಭವಾಗಿವೆ. ಇದರ ವಿವರಗಳನ್ನು ಕಳೆದ ತಿಂಗಳ ಹಾಗೂ ಈ ತಿಂಗಳ ಸ್ನೇಹಚಿಂತನೆಯಲ್ಲಿ ಕೊಡಲಾಗಿದೆ. ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಸ್ಪರ್ಧೆಗಳಲ್ಲಿ ಭಾಗವಹಿಸಬೇಕಾಗಿ ವಿನಂತಿಸುತ್ತೇನೆ. ಹಾಗೆಯೇ ವೈದ್ಯಕೀಯ ಹಾಗೂ ವಿಮಾ ವಿಭಾಗದಿಂದ ನಡೆದ ನಿರಂತರ ವೈದ್ಯಕೀಯ ಅರಿವು ಕಾರ್ಯಕ್ರಮದಡಿಯಲ್ಲಿ ವೈದ್ಯಕೀಯ ವಿಭಾಗದ ಚೇರ್‌ಪರ್ಸನ್ ಶ್ರೀ ಕೆ. ನಿರಂಜನ ಶೆಟ್ಟಿಯವರು ಹಾಗೂ ಸಮಿತಿ ಸದಸ್ಯರಿಂದ ಬಂಟರ ಸಂಘದ ಆರ್.ಎನ್.ಎಸ್. ವಿದ್ಯಾನಿಕೇತನದ ವಿದ್ಯಾರ್ಥಿನಿಯರಿಗಾಗಿ ಹದಿಹರೆಯದ ಬಾಲಕಿಯರ ಸಮಸ್ಯೆಗಳು ಮತ್ತು ಪರಿಹಾರಗಳು ಎಂಬ ವಿಷಯವಾಗಿ ಖ್ಯಾತ ಸ್ತ್ರೀರೋಗ ತಜ್ಞೆ ಡಾ. ವಿದ್ಯಾಶ್ರೀಯವರಿಂದ ಉಪನ್ಯಾಸ ಕಾರ್ಯಕ್ರಮ ಅರ್ಥಪೂರ್ಣವಾಗಿ ಜರುಗಿತು. ಬೆಂಗಳೂರಿನ ಲಯನ್ಸ್ ಕ್ಲಬ್ ಮೆಗಾಸಿಟಿಯವರಿಂದ ಶಾಲಾ ವಿದ್ಯಾರ್ಥಿನಿಯರ ಉಪಯೋಗಕ್ಕಾಗಿ ನೈರ್ಮಲ್ಯ ಪ್ಯಾಡ್ ವಿಲೇವಾರಿ ಯಂತ್ರವನ್ನು ಉಚಿತವಾಗಿ ನೀಡಲಾಯಿತು. ಲಯನ್ಸ್ ಕ್ಲಬ್‌ನ ಸದಸ್ಯರಿಗೆ ವಂದನೆಗಳು.

ಸಂಘದ ಆರ್.ಎನ್.ಎಸ್. ವಿದ್ಯಾನಿಕೇತನ I ಮತ್ತು II ರ ಸಂಕೀರ್ಣಗಳಲ್ಲಿ ಕೆಲವೊಂದು ದುರಸ್ತಿ ಕೆಲಸಗಳು ಭರದಿಂದ ಸಾಗುತ್ತಿದ್ದು, ವಿದ್ಯಾನಿಕೇತನ II ರಲ್ಲಿನ Physics, Chemistry, Biology and Electronics lab ಗಳಿಗೆ ಬೇಕಾದ ಸಾಮಾಗ್ರಿಗಳು, ಪೀಠೋಪಕರಣಗಳು ಹಾಗೂ ಶೆಲ್ಫ್‌ಗಳನ್ನು ಹಾಗೂ ವಿದ್ಯಾನಿಕೇತನ I ರಲ್ಲಿನ ಕೆಲವೊಂದು ಅಗತ್ಯತೆಗಳನ್ನು ಪೂರೈಸಲಾಗುತ್ತಿದೆ. ವಿದ್ಯಾನಿಕೇತನ II ರಲ್ಲಿ ಹೂವಿನ ತೋಟಗಳಿಗೆ ಕಾಯಕಲ್ಪ, ನರ್ಸರಿ ತರಗತಿಗಳಿಗೆ ಬೇಕಾದ ಆಟದ ಸಲಕರಣೆಗಳು, ಹಾಸ್ಟೆಲ್‌ಗಳಲ್ಲಿನ ಕೆಲವು ಅಗತ್ಯತೆಗಳನ್ನು ಪೂರೈಸಲಾಗುತ್ತಿದೆ. ಶಾಲೆಯ ಆಡಳಿತ ಮಂಡಳಿಯ ಈ ತಿಂಗಳ ಸಭೆಯಲ್ಲಿ ಇವುಗಳ ವಿಷಯವಾಗಿ ಕೂಲಂಕುಷವಾಗಿ ಚರ್ಚಿಸಲಾಗಿತ್ತು. ಇದೆಲ್ಲದರ ಫಲವಾಗಿ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಇನ್ನೂ ಹೆಚ್ಚಿನ ವಿದ್ಯಾರ್ಥಿಗಳ ಸೇರ್ಪಡೆಯಾಗಲಿದೆ. ಶಾಲಾ ಶಿಕ್ಷಕ ವರ್ಗದವರಿಗೆ ಉತ್ತಮ ರೀತಿಯ ಟ್ರೈನಿಂಗ್ ಕಾರ್ಯಕ್ರಮಗಳನ್ನು ಆಯೋಜಿಸಲು ಕಾರ್ಯಪ್ರವೃತ್ತರಾಗಿದ್ದೇವೆ. ಹೀಗೆ ದಿನೇ ದಿನೇ ಶಾಲೆಯು ಅಭಿವೃದ್ಧಿ ಪಥದಲ್ಲಿ ಸಾಗಬೇಕೆಂಬ ಆಸೆ ನಮ್ಮದು.

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

# ಗೌರವ ಕಾರ್ಯದರ್ಶಿಗಳ ವರದಿ



**ಮಾನ್ಯ ಸದಸ್ಯ ಬಾಂಧವರೇ,**

ದೀಪಾವಳಿ ಹಬ್ಬವನ್ನು ದಿನಾಂಕ 30.10.2022 ರಂದು ಸಂಘದ ಆವರಣದಲ್ಲಿ ವಿಶೇಷ ಆಚರಣೆಗಳೊಂದಿಗೆ ಸಂಭ್ರಮದಿಂದ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ನಿಟ್ಟೆ ಡೀಮ್ಡ್ ವಿಶ್ವವಿದ್ಯಾಲಯದ ಕುಲಪತಿಗಳಾದ ಶ್ರೀ ಎನ್. ವಿನಯ್ ಹೆಗ್ಡೆ, ಗೌರವ ಅತಿಥಿಗಳಾಗಿ ಹೃದಯ ತಜ್ಞ ಡಾ. ಶ್ರೀಕಾಂತ್ ಬಿ. ಶೆಟ್ಟಿ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಹಿರಿಯ ಧಾರ್ಮಿಕ, ಸಾಮಾಜಿಕ ಹಾಗೂ ರಾಜಕೀಯ ಮುತ್ಸದಿ ಶ್ರೀ ಬಸ್ರೂರು ಅಪ್ಪಣ್ಣ ಹೆಗ್ಡೆಯವರಿಗೆ 'ದಿ. ಶ್ರೀ ಕೆ. ಶ್ರೀನಿವಾಸ ಆಳ್ವ ಸ್ಮಾರಕ ಸಾಮಾಜಿಕ ಸೇವಾ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕಳೆದ ನಾಲ್ಕು ವರ್ಷಗಳ ಕಾಲ ಸಂಘವನ್ನು ಸಮರ್ಥವಾಗಿ ಮುನ್ನಡೆಸಿದ ಸಂಘದ ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿಯವರನ್ನು ಗಣ್ಯರ ಸಮ್ಮುಖದಲ್ಲಿ ಗೌರವಿಸಲಾಯಿತು. ದೀಪಾವಳಿಯ ಸಾಂಪ್ರದಾಯಿಕ ಆಚರಣೆಗಳನ್ನು ಹಾಗೂ ವಿಭಿನ್ನ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿದ ಸಾಂಸ್ಕೃತಿಕ ಸಮಿತಿಯ ಚೇರ್‌ಪರ್ಸನ್ ಶ್ರೀಮತಿ ಜಯಶ್ರೀ ಸಿ. ರೈ, ಸಂಚಾಲಕರಾದ ಶ್ರೀ ಮಹೇಶ್ ಶೆಟ್ಟಿ ಹಾಗೂ ತಂಡದ ಎಲ್ಲಾ ಸದಸ್ಯರಿಗೆ ಹೃತ್ಪೂರ್ವಕ ಅಭಿನಂದನೆಗಳು. ಅತೀ ಹೆಚ್ಚಿನ ಸಂಖ್ಯೆಯಲ್ಲಿ ದೀಪಾವಳಿ ಸಂಭ್ರಮದಲ್ಲಿ ಜೊತೆಯಾದ ತಮಗೆಲ್ಲರಿಗೂ ವಂದನೆಗಳು.

ದಿನಾಂಕ 29.10.2022 ರಂದು ವೈದ್ಯಕೀಯ ವಿಭಾಗ ಮತ್ತು ವಿಮಾ ವಿಭಾಗವು ನಿರಂತರ ವೈದ್ಯಕೀಯ ಅರಿವು ಕಾರ್ಯಕ್ರಮದಡಿಯಲ್ಲಿ ಆಯೋಜಿಸಿದ್ದ ಸೆಮಿನಾರ್‌ನಲ್ಲಿ ಖ್ಯಾತ ಸ್ತ್ರೀರೋಗ ತಜ್ಞೆ ಡಾ. ಜೆ. ಬಿ. ವಿದ್ಯಾಶ್ರೀ ಇವರು ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದ ವಿದ್ಯಾರ್ಥಿನಿಯರಿಗಾಗಿ ಉಪನ್ಯಾಸ ನೀಡಿದರು. ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–II ಪಿಯು ಕಾಲೇಜಿನ ವಿದ್ಯಾರ್ಥಿನಿಯರ ಸೌಲಭ್ಯಕ್ಕಾಗಿ ಸಂಘದ ಮಾಜಿ ಗೌರವ ಕಾರ್ಯದರ್ಶಿ ಶ್ರೀ ಎಂ. ವೇಣುಗೋಪಾಲ್ ಶೆಟ್ಟಿ ಹಾಗೂ ಮಾಜಿ ಉಪಾಧ್ಯಕ್ಷೆ ಶ್ರೀಮತಿ ಹೇಮಲತಾ ವಿ ಶೆಟ್ಟಿ ಇವರ ಸಹಕಾರದಿಂದ ಲಯನ್ಸ್ ಕ್ಲಬ್ ಮೆಗಾಸಿಟಿ ಬೆಂಗಳೂರು ವತಿಯಿಂದ ಹಾಗೂ ವೈದ್ಯಕೀಯ ವಿಭಾಗದ ವತಿಯಿಂದ ತಲಾ ಒಂದು ನೈರ್ಮಲ್ಯ ಪ್ಯಾಡ್ ವಿಲೇವಾರಿ ಯಂತ್ರಗಳನ್ನು ಕೊಡುಗೆಯಾಗಿ ನೀಡಲಾಯಿತು. ವಿದ್ಯಾರ್ಥಿನಿಯರಿಗೆ ಬಹಳ ಉಪಯುಕ್ತ ಕಾರ್ಯಕ್ರಮ ಆಯೋಜಿಸಿದ ವೈದ್ಯಕೀಯ ಮತ್ತು ವಿಮಾ ವಿಭಾಗದ ಚೇರ್‌ಮೆನ್ ಶ್ರೀ ನಿರಂಜನ್ ಶೆಟ್ಟಿ ಕೆ. ಸಂಚಾಲಕರಾದ ಡಾ. ಕೆ. ಸವಿತಾ ರೈ ಮತ್ತು ತಂಡಕ್ಕೆ ಅಭಿನಂದನೆಗಳು.

ಕ್ರೀಡಾ ವಿಭಾಗವು ನವೆಂಬರ್ 7 ರಂದು ಪ್ರಥಮ ಬಾರಿಗೆ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದಲ್ಲಿ ಆಯೋಜಿಸಿದ್ದ ಅಥ್ಲೆಟಿಕ್ ಕ್ರೀಡಾಕೂಟವು ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ I ಮತ್ತು II ದೈಹಿಕ ಶಿಕ್ಷಣ ವಿಭಾಗದ ಶಿಕ್ಷಕರು, ಸಿಬ್ಬಂದಿವರ್ಗ, ಸಂಘದ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳ ಸಹಕಾರದೊಂದಿಗೆ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯ ಬಾಂಧವರು ತಮ್ಮ ಮಕ್ಕಳೊಂದಿಗೆ ಭಾಗವಹಿಸಿ ಕ್ರೀಡಾಕೂಟವನ್ನು ಅತ್ಯಂತ ಯಶಸ್ವಿಗೊಳಿಸಿದರು. ಕ್ರೀಡಾಕೂಟಕ್ಕೆ ಅಹರ್ನಿಶಿ ದುಡಿದ ಕ್ರೀಡಾ ಸಮಿತಿಯ ಚೇರ್‌ಮೆನ್ ಶ್ರೀ ಕಿರಣ್ ಶೆಟ್ಟಿ, ಸಂಚಾಲಕರಾದ ಶ್ರೀ ನಿತ್ಯರಂಜನ್ ಶೆಟ್ಟಿ ಹಾಗೂ ತಂಡದ ಎಲ್ಲಾ ಸದಸ್ಯರಿಗೆ ಅಭಿನಂದನೆಗಳು.

67ನೇ ಕನ್ನಡ ರಾಜ್ಯೋತ್ಸವವನ್ನು ಬಂಟರ ಸಂಘ ಆರ್.ಎನ್.ಎಸ್.ವಿದ್ಯಾನಿಕೇತನ ಮತ್ತು ಸಂಯುಕ್ತ ಪದವಿಪೂರ್ವ ಕಾಲೇಜಿನ ಆವರಣದಲ್ಲಿ ಸಂಭ್ರಮದಿಂದ ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಜನಪ್ರಿಯ ಜಾನಪದ ಗಾಯಕ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಅಪ್ಪಗೆರೆ ತಿಮ್ಮರಾಜುರವರು ಭಾಗವಹಿಸಿದ್ದರು.

ಸಂಘದ ವತಿಯಿಂದ ಸಂಘದ ಸದಸ್ಯರಿಗೆ ವಿವಿಧ ಸೌಲಭ್ಯಗಳನ್ನು ಕೊಡಮಾಡುತ್ತಿದ್ದು, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳ ಶೈಕ್ಷಣಿಕ ಶುಲ್ಕದ ವೆಚ್ಚವನ್ನು ಭರಿಸುವ ವಿದ್ಯಾದೀವಿಗೆ ಹಾಗೂ ಶೈಕ್ಷಣಿಕ ಸಹಾಯಧನ ಯೋಜನೆಯಡಿಯಲ್ಲಿ ವಿದ್ಯಾರ್ಥಿವೇತನವನ್ನು ನೀಡಲಾಗಿದೆ.

ದಿನಾಂಕ 03.12.2022 ರಂದು ವೈದ್ಯಕೀಯ ವಿಭಾಗ ಮತ್ತು ಸಮಾಜ ಸೇವಾ ವಿಭಾಗ ಜಂಟಿಯಾಗಿ ಆರೋಗ್ಯ ತಪಾಸಣಾ ಶಿಬಿರ, ಸರಕಾರದ ವಿವಿಧ ಯೋಜನೆಗಳ ಅಡಿಯಲ್ಲಿ ಉಚಿತ ಚಿಕಿತ್ಸಾ ಸೌಲಭ್ಯ, ರಕ್ತದಾನ ಶಿಬಿರ ಹಾಗೂ ಸಿ.ಇ.ಜಿ. ಮತ್ತು ಸಿ.ಎಸ್.ಸಿ. ಕೇಂದ್ರದ ಸೌಲಭ್ಯಗಳನ್ನು ನೀಡುವ ಕಾರ್ಯಕ್ರಮ ಆಯೋಜಿಸಿದ್ದು, ಸದಸ್ಯ ಬಾಂಧವರೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಈ ಕಾರ್ಯಕ್ರಮದ ಪ್ರಯೋಜನ ಪಡೆಯಬೇಕಾಗಿ ವಿನಂತಿ. ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆಯ ಪ್ರಯುಕ್ತ ವಿವಿಧ ಸ್ಪರ್ಧೆಗಳು, ರಂಗತರಬೇತಿ ಹಾಗೂ ಯಕ್ಷಗಾನ ಸಮಿತಿಯ ವತಿಯಿಂದ ವಿಶೇಷ ಕಾರ್ಯಕ್ರಮಗಳು ನಡೆಯಲಿದ್ದು, ಸದಸ್ಯ ಬಾಂಧವರು ತಮ್ಮ ಮಕ್ಕಳೊಂದಿಗೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿ.

ಇಂತಿ ತಮ್ಮ ಪ್ರೀತಿಯ,

**ಬಿ. ಆನಂದರಾಮ ಶೆಟ್ಟಿ**
ಗೌರವ ಕಾರ್ಯದರ್ಶಿ

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

# ಕ್ರೀಡಾ ಸಮಿತಿ

**ಆತ್ಮೀಯ ಸದಸ್ಯರೇ,**

2022–23 ನೇ ಸಾಲಿಗೆ ಕ್ರೀಡಾ ಸಾಧನಾ ಪ್ರಶಸ್ತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುತ್ತಿದ್ದು, ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳು ಈ ಕೆಳಗಿನ ಅರ್ಹತೆಗಳನ್ನು ಹೊಂದಿದ್ದು, ದಾಖಲೆಗಳನ್ನು ಲಗತ್ತಿಸತಕ್ಕದ್ದು.

- ತಮ್ಮ ಸಾಧನೆಗಳು ಕಳೆದ ಸಾಲಿನಲ್ಲಿ ಪಡೆದ ಪ್ರಶಸ್ತಿ ಸ್ವೀಕರಿಸಿರುವುದಕ್ಕಿಂತ ಹೆಚ್ಚಿನದಾಗಿರಬೇಕು.
- ದೇಶ ಅಥವಾ ರಾಜ್ಯವನ್ನು ಪ್ರತಿನಿಧಿಸಿ ಪ್ರಶಸ್ತಿ ಪಡೆದಿರತಕ್ಕದ್ದು. ಇಲ್ಲವೇ ಅಖಿಲ ಭಾರತ ಅಂತರ–ವಿಶ್ವವಿದ್ಯಾಲಯ ಕ್ರೀಡಾಕೂಟಗಳಲ್ಲಿನ ಪ್ರಶಸ್ತಿ / ಪದಕ ವಿಜೇತರಾಗಿರಬೇಕು.
- ಭಾಗವಹಿಸಿರುವ ಎಲ್ಲಾ ಸ್ಪರ್ಧೆಗಳು ಭಾರತೀಯ ಒಲಿಂಪಿಕ್ಸ್ ಅಸೋಸಿಯೇಶನ್‌ನ ಪ್ರಾಯೋಜಕತ್ವದಲ್ಲಿ ನಡೆದಿರಬೇಕು ಅಥವಾ ಅದರಿಂದ ಗುರುತಿಸಲ್ಪಟ್ಟ ಅಂಗ ಸಂಸ್ಥೆಗಳ ವತಿಯಿಂದ ನಡೆಸಿರುವ ಕ್ರೀಡಾಕೂಟಗಳಾಗಿರಬೇಕು.
- ಅರ್ಜಿಯೊಂದಿಗೆ ತಮ್ಮ ಇತ್ತೀಚಿನ ಸಾಧನೆಯ ದಾಖಲೆಗಳ ಎಲ್ಲಾ ಯಥಾ ಪ್ರತಿ, ತಮ್ಮ ವೈಯಕ್ತಿಕ ಪರಿಚಯ, 1 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಒದಗಿಸಬೇಕು.

ಮೇಲ್ಕಂಡ ಅರ್ಹತೆಯುಳ್ಳ ಅರ್ಜಿಗಳನ್ನು ಗೌರವ ಕಾರ್ಯದರ್ಶಿ ಇವರಿಗೆ ನಮೂದಿಸಿ ಸಂಘದ ವಿಳಾಸಕ್ಕೆ ದಿನಾಂಕ 31.12.2022ರ ಒಳಗಾಗಿ ತಲುಪುವಂತೆ ಸಲ್ಲಿಸಲು ಕೋರಲಾಗಿದೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ದಿನಾಂಕ 26.01.2023 ರಂದು ನಡೆಯಲಿರುವ ಸಂಘದ ಸ್ಥಾಪಕರ ದಿನಾಚರಣೆಯ ಸಮಾರಂಭದಲ್ಲಿ ನಗದು ಹಾಗೂ ಪ್ರಶಸ್ತಿ ಫಲಕ ನೀಡಿ ಗೌರವಿಸಲಾಗುವುದು.

ನಿಗದಿತ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.


**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ನಿತ್ಯರಂಜನ್ ಶೆಟ್ಟಿ**
ಸಂಚಾಲಕರು, ಕ್ರೀಡಾ ಸಮಿತಿ

**ಕಿರಣ್‌ಕುಮಾರ್ ಶೆಟ್ಟಿ**
ಚೇರ್‌ಪರ್ಸನ್, ಕ್ರೀಡಾ ಸಮಿತಿ

**ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ಕ್ರೀಡಾ ಸಮಿತಿ ಸದಸ್ಯರು**




## *Congratulations*

**Dr. Jayaprasad Shetty** was presented Life time Achievement Award by Mysore Maharaja on behalf of Association of Oral and Maxillofacial Surgeons of India on 14th October 2022. Dr. Jayaprasad Shetty is our Sangha's member. Bunts Sangha Bangaloru congratulates and wishes him all the best.

# ಬಂಟರ ಸಂಘ ಬೆಂಗಳೂರು ಸಾಂಸ್ಕೃತಿಕ ವಿಭಾಗ

## ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಸಾಂಸ್ಕೃತಿಕ ಸ್ಪರ್ಧೆ 2022–23

**ಸ್ಥಳ : ಬಂಟರ ಸಂಘದ ಆವರಣ**
**ದಿನಾಂಕ : 11.12.2022, ಭಾನುವಾರ, ಬೆಳಿಗ್ಗೆ 09.30 ರಿಂದ**
**ಹೆಸರು ನೋಂದಾಯಿಸಲು ಕೊನೆಯ ದಿನಾಂಕ : 9.12.2022**

### 1. ಛದ್ಮವೇಷ (FANCY DRESS)

**ಪ್ರವೇಶ ಶುಲ್ಕ** : ರೂ.100/– ಕಾಲಾವಕಾಶ : 2 ನಿಮಿಷ
**ವಯೋಮಿತಿ** :
ಎ) 6 ವರ್ಷದ ಒಳಗೆ
ಬಿ) 6 ವರ್ಷ ಮೇಲ್ಪಟ್ಟು 10 ವರ್ಷದವರೆಗೆ
ಸಿ) 10 ವರ್ಷ ಮೇಲ್ಪಟ್ಟು 16 ವರ್ಷದವರೆಗೆ
ಡಿ) 16 ವರ್ಷ ಮೇಲ್ಪಟ್ಟು
(ಹಿನ್ನೆಲೆ ಧ್ವನಿ/ ಸಂಗೀತವನ್ನು ಪರಿಗಣಿಸಲಾಗುವುದು)

### 2. ಆಶು ಭಾಷಣ (PICK & SPEECH) – ಕನ್ನಡ / English

**ಪ್ರವೇಶ ಶುಲ್ಕ** : ರೂ.100/– ಕಾಲಾವಕಾಶ : 2 ನಿಮಿಷ
**ವಯೋಮಿತಿ** :
ಎ) 6 ವರ್ಷ ಮೇಲ್ಪಟ್ಟು 10 ವರ್ಷದ ಒಳಗೆ
ಬಿ) 10 ವರ್ಷ ಮೇಲ್ಪಟ್ಟು 16 ವರ್ಷದವರೆಗೆ
ಸಿ) 16 ವರ್ಷ ಮೇಲ್ಪಟ್ಟು 30 ವರ್ಷದವರೆಗೆ
ಡಿ) 30 ವರ್ಷ ಮೇಲ್ಪಟ್ಟು (ಕಾಲಾವಕಾಶ 3 ನಿಮಿಷ)

**ಮಧ್ಯಾಹ್ನ 1.30 ರಿಂದ**

### 3. ಸಂಗೀತ (MUSIC)

**ಪ್ರವೇಶ ಶುಲ್ಕ** : ರೂ.100/– ಪ್ರತಿ ವ್ಯಕ್ತಿಗೆ, ರೂ.200/– ಪ್ರತಿ ಗುಂಪಿಗೆ

**ಎ. ಶಾಸ್ತ್ರೀಯ ಸಂಗೀತ–ಹಿಂದೂಸ್ಥಾನಿ/ಕರ್ನಾಟಕ – ಕಾಲಾವಕಾಶ 3 ನಿಮಿಷ**
**(Shastriya Sangeetha (Hindustani/ Karnatic)**

**ವಯೋಮಿತಿ** :
ಎ) 6 ವರ್ಷ ಮೇಲ್ಪಟ್ಟು 10 ವರ್ಷದವರೆಗೆ
ಬಿ) 10 ವರ್ಷ ಮೇಲ್ಪಟ್ಟು 16 ವರ್ಷದವರೆಗೆ
ಸಿ) 16 ವರ್ಷ ಮೇಲ್ಪಟ್ಟು

**ಬಿ. ಸುಗಮ ಸಂಗೀತ – ಕಾಲಾವಕಾಶ 2½ ನಿಮಿಷ**

**ಸಿ. ಸಿನಿಮಾ ಗೀತೆಗಳು (Film Song) – ಕಾಲಾವಕಾಶ 2½ ನಿಮಿಷ**

**ವಯೋಮಿತಿ** : ಎ) 6 ರಿಂದ 10 ವರ್ಷದವರೆಗೆ
ಬಿ) 10 ವರ್ಷ ಮೇಲ್ಪಟ್ಟು 16 ವರ್ಷದವರೆಗೆ
ಸಿ) 16 ವರ್ಷ ಮೇಲ್ಪಟ್ಟು 25 ವರ್ಷದವರೆಗೆ
ಡಿ) 25 ವರ್ಷ ಮೇಲ್ಪಟ್ಟು

ಓರ್ವ ಸ್ಪರ್ಧಿಯು ಗರಿಷ್ಠ ಎರಡು ವಿಭಾಗಗಳಲ್ಲಿ ಮಾತ್ರ ಸ್ಪರ್ಧಿಸತಕ್ಕದ್ದು (ಎ.ಬಿ.ಸಿ)

**ಡಿ. ಸಮೂಹ ಗಾನ (Group Song-Open for all – 3 members & above)**

**ಕಾಲಾವಕಾಶ – 2½ ನಿಮಿಷ**

**ಇ. ಅಂತ್ಯಾಕ್ಷರಿ – ಹಿಂದಿ ಮತ್ತು ಕನ್ನಡ (Anthyakshari–Hindi & Kannada) ಸಂಜೆ 5.00 ರಿಂದ**

**ವಯೋಮಿತಿ** : ಮುಕ್ತ (ಪ್ರತೀ ತಂಡಕ್ಕೆ 3 ಸದಸ್ಯರು)
**ಪ್ರವೇಶ ಶುಲ್ಕ** : ರೂ.200/– ಪ್ರತೀ ತಂಡಕ್ಕೆ

**ಸ್ಥಳ : ಬಂಟರ ಸಂಘದ ಆವರಣ**
**ದಿನಾಂಕ : 14.01.2023, ಶನಿವಾರ, ಮಧ್ಯಾಹ್ನ 02.30 ರಿಂದ**
**ಹೆಸರು ನೋಂದಾಯಿಸಲು ಕೊನೆಯ ದಿನಾಂಕ : 12.01.2023**

**1. ರಂಗೋಲಿ (ಪುಷ್ಪ ರಂಗೋಲಿ) (Pookalam)**

**ಪ್ರವೇಶ ಶುಲ್ಕ** : ರೂ.100/– ಪ್ರತಿ ವ್ಯಕ್ತಿಗೆ
**ಕಾಲಾವಕಾಶ** : 60 ನಿಮಿಷ
**ವಯೋಮಿತಿ** : ಎ) 16 ವರ್ಷದ ಒಳಗೆ
ಬಿ) 16 ವರ್ಷ ಮೇಲ್ಪಟ್ಟು

* ಸ್ಪರ್ಧಿಗಳ ಸಂಖ್ಯೆ 6 ಕ್ಕಿಂತ ಕಡಿಮೆ ಇದ್ದ ಪಕ್ಷದಲ್ಲಿ ವಯೋಮಿತಿಯನ್ನು ಮುಕ್ತ ಎಂದು ಪರಿಗಣಿಸಲಾಗುವುದು

**2. ಚಿತ್ರ ಬಿಡಿಸುವುದು (DRAWING)**

**ಪ್ರವೇಶ ಶುಲ್ಕ** : ರೂ.100/– ಪ್ರತಿ ವ್ಯಕ್ತಿಗೆ
**ಕಾಲಾವಕಾಶ** : 45 ನಿಮಿಷ
**ವಯೋಮಿತಿ** : ಎ) 6 ವರ್ಷ ಮೇಲ್ಪಟ್ಟು 10 ವರ್ಷದವರೆಗೆ
ಬಿ) 10 ವರ್ಷ ಮೇಲ್ಪಟ್ಟು 16 ವರ್ಷದವರೆಗೆ
ಸಿ) 16 ವರ್ಷ ಮೇಲ್ಪಟ್ಟು

**ಸ್ಥಳ : ಬಂಟರ ಸಂಘದ ಆವರಣ**
**ದಿನಾಂಕ : 15.01.2023, ಭಾನುವಾರ, ಬೆಳಿಗ್ಗೆ : 9.30 ರಿಂದ**
**ಹೆಸರು ನೋಂದಾಯಿಸಲು ಕೊನೆಯ ದಿನಾಂಕ : 12.01.2023**

## 1. ನೃತ್ಯ (Dance)

1. ಶಾಸ್ತ್ರೀಯ ನೃತ್ಯ (Indian Classical Solo)
2. ಜಾನಪದ ನೃತ್ಯ (Folk Solo)
3. ಫ್ರೀ ಸ್ಟೈಲ್ (Free - Style - Solo)
4. ಸಮೂಹ ನೃತ್ಯ (Group Dance - 3 Members & Above - Open)

ಶಾಸ್ತ್ರೀಯ, ಜಾನಪದ, ಫ್ರೀ ಸ್ಟೈಲ್ ನೃತ್ಯಗಳಲ್ಲಿ ಓರ್ವ ಸ್ಪರ್ಧಿಯು ಯಾವುದೇ ಗರಿಷ್ಠ ಎರಡು ವಿಭಾಗಗಳಲ್ಲಿ ಮಾತ್ರ ಭಾಗವಹಿಸತಕ್ಕದ್ದು.

**ಪ್ರವೇಶ ಶುಲ್ಕ :** ಎ) ಪ್ರತಿ ವ್ಯಕ್ತಿಗೆ – ರೂ. 100/–
ಬಿ) ಪ್ರತಿ ತಂಡಕ್ಕೆ / ಜೋಡಿಗೆ ರೂ. 200/–

| **ವಯೋಮಿತಿ** | **ಕಾಲಾವಕಾಶ** |
|---|---|
| ಎ) 6 ವರ್ಷ ಮೇಲ್ಪಟ್ಟು 10 ವರ್ಷದವರೆಗೆ | 2 + 1 ನಿಮಿಷ |
| ಬಿ) 10 ವರ್ಷ ಮೇಲ್ಪಟ್ಟು 16 ವರ್ಷದವರೆಗೆ | 2 + 1 ನಿಮಿಷ |
| ಸಿ) 16 ವರ್ಷ ಮೇಲ್ಪಟ್ಟು 30 ವರ್ಷದವರೆಗೆ | 2 + 1 ನಿಮಿಷ |
| ಡಿ) 30 ವರ್ಷದ ಮೇಲ್ಪಟ್ಟು | 2 + 1 ನಿಮಿಷ |
| ಇ) ಸಮೂಹ ನೃತ್ಯ (ಮುಕ್ತ) | 2 + 1 ನಿಮಿಷ |

**(ಶಾಸ್ತ್ರೀಯ ನೃತ್ಯಕ್ಕೆ ಕಾಲಾವಕಾಶ – 3 + 1 ನಿಮಿಷ)**

| | |
|---|---|
| ಅನುರಾಧ ಎ. ಶೆಟ್ಟಿ - 99807 69129 | ಅನುಸೂಯ ಶೆಟ್ಟಿ - 98444 30362 |
| ಆತ್ಮರಾಮ ಆಳ್ವ - 90082 87507 | ಕಾರ್ತಿಕ್ ಶೆಟ್ಟಿ - 95356 16575 |
| ಪ್ರಸಾದ್ ಶೆಟ್ಟಿ - 96630 05588 | ಸಚಿನ್ ಶೆಟ್ಟಿ - 77602 31093 |
| ಸಬಿತ ಎ. ಮಲ್ಲಿ - 92431 26335 | ಸಂದೀಪ್ ಹೆಗ್ಡೆ - 99459 35494 |
| ಸಂತೋಷ್ ಶೆಟ್ಟಿ - 90354 29265 | ಸಂತೋಷ್ ಶೆಟ್ಟಿ - 98452 13876 |
| ಶೋಭಾ ಎಸ್. ಶೆಟ್ಟಿ - 93432 35050 | ಶರತ್ ಶೆಟ್ಟಿ - 97405 42476 |
| ಶಶಿಧರ್ ಶೆಟ್ಟಿ - 63638 65719 | ಸುಖಲತಾ ಶೆಟ್ಟಿ - 92430 80987 |
| ಸುವೀಕ್ಷಾ ಶೆಟ್ಟಿ - 95388 50360 | |

- ಎಲ್ಲಾ ಸ್ಪರ್ಧೆಗಳು ನಿಗದಿಪಡಿಸಿದ ಸಮಯದಲ್ಲೇ ನಡೆಯುವುದು. ಸ್ಪರ್ಧಿಗಳು ನಿಗದಿಪಡಿಸಿದ ಸಮಯಕ್ಕಿಂತ 30 ನಿಮಿಷಗಳ ಮುಂಚಿತವಾಗಿ ತಮ್ಮ ಹಾಜರಾತಿಯನ್ನು ಖಚಿತಪಡಿಸಿಕೊಳ್ಳತಕ್ಕದ್ದು.
- **ನಿಗದಿತ (ಕೊನೆಯ) ದಿನಾಂಕದ ನಂತರ ಬಂದ ನೋಂದಣಿಗಳನ್ನು ಸ್ವೀಕರಿಸಲಾಗುವುದಿಲ್ಲ.** ನೋಂದಣಿಯನ್ನು ಮೊದಲೇ ಮಾಡಿಸಿದ್ದಲ್ಲಿ ಮಾತ್ರ ಪ್ರವೇಶ ಶುಲ್ಕವನ್ನು ಸ್ಥಳದಲ್ಲಿ ಸ್ವೀಕರಿಸಲಾಗುವುದು. ಸ್ಪರ್ಧೆಯ ವೇಳೆಯಲ್ಲಿ ಕಡ್ಡಾಯವಾಗಿ ರಶೀದಿಯನ್ನು ತೋರಿಸತಕ್ಕದ್ದು. ಸ್ಪರ್ಧೆ ತಡರಾತ್ರಿಯವರೆಗೆ ನಡೆದು ಸ್ಪರ್ಧಿಗಳಿಗೆ ಹಾಗೂ ತೀರ್ಪುಗಾರರಿಗೆ ಅನಾನುಕೂಲವಾಗದಂತೆ ಮಾಡಲು ನಿಗದಿತ ದಿನಾಂಕದ ಮೊದಲು ನೋಂದಣಿ ಕಡ್ಡಾಯ.
- ಯಾವುದೇ ಸ್ಪರ್ಧೆಯಲ್ಲಿ ಮೂರು ಸ್ಪರ್ಧಿಗಳು ಮತ್ತು ಅದಕ್ಕಿಂತ ಕಮ್ಮಿ ಇದ್ದರೆ ಒಂದು ಬಹುಮಾನ, ಮೂರರಿಂದ ಆರು ಸ್ಪರ್ಧಿಗಳು ಭಾಗವಹಿಸಿದ್ದಲ್ಲಿ ಕೇವಲ ಎರಡು ಬಹುಮಾನಗಳು ಮತ್ತು ಆರಕ್ಕಿಂತ ಹೆಚ್ಚು ಸ್ಪರ್ಧಿಗಳು ಇದ್ದಲ್ಲಿ ಮೂರು ಬಹುಮಾನ ನೀಡಲಾಗುವುದು.
- ಸ್ಪರ್ಧಿಗಳು ತಮ್ಮ ಜನನ ದಿನಾಂಕದ ದೃಢೀಕರಣವನ್ನು ಹಾಜರುಪಡಿಸಬೇಕು.

**ಈ ಎಲ್ಲಾ ಸ್ಪರ್ಧೆಗಳಿಗೆ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸ್ಪರ್ಧಾಳುಗಳನ್ನು ಪ್ರೋತ್ಸಾಹಿಸಬೇಕಾಗಿ ವಿನಂತಿ**

**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ಮಹೇಶ್ ಶೆಟ್ಟಿ, ಬೈಲೂರು**
ಸಂಚಾಲಕರು, ಸಾಂಸ್ಕೃತಿಕ ಸಮಿತಿ
**ಮೊ : 99809 51966**

**ಜಯಶ್ರೀ ಸಿ. ರೈ**
ಚೇರ್‌ಮೆನ್, ಸಾಂಸ್ಕೃತಿಕ ಸಮಿತಿ
**ಮೊ : 99459 99255**

---

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

# "ಸಮಾಜ ಸೇವಾ ಸಮಿತಿ"

**"ರಕ್ತದಾನ ಶಿಬಿರ ಹಾಗೂ ಸಿ.ಇ.ಜಿ. ಮತ್ತು ಸಿ.ಎಸ್.ಸಿ. ಕೇಂದ್ರದ ಸೌಲಭ್ಯಗಳು"**

**ದಿನಾಂಕ : 03.12.2022, ಶನಿವಾರ, ಬೆಳಿಗ್ಗೆ 10.00 ರಿಂದ ಸಂಜೆ 6.00 | ಸ್ಥಳ : ಬಂಟರ ಸಂಘದ ಆವರಣ**

**"ರಾಷ್ಟ್ರೋತ್ಥಾನ ರಕ್ತ ಕೇಂದ್ರ"** ಇವರ ಸಹಯೋಗದೊಂದಿಗೆ, ಬೃಹತ್ ರಕ್ತದಾನ ಶಿಬಿರ

ಮತ್ತು

**ಸಮಾಜ ಭಾಂದವರಿಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಅನೇಕ ಸೌಲಭ್ಯಗಳ ನೋಂದಣೆ ಮತ್ತು ವಿತರಣೆ**

ಆಧಾರ್ ಮತ್ತು ಪಾನ್‌ಕಾರ್ಡ್ ನೋಂದಣಿ ಹಾಗೂ ತಿದ್ದುಪಡಿ.
ಹಿರಿಯ ನಾಗರೀಕರ ಗುರುತಿನ ಚೀಟಿ / Senior Citizen Card.
ಆಯುಷ್ಮಾನ್ ಕಾರ್ಡ್.
ಪಡಿತರ ಚೀಟಿ ಸೇರ್ಪಡೆ ಮತ್ತು ತಿದ್ದುಪಡಿ.
ಚುನಾವಣಾ ಗುರುತಿನ ಚೀಟಿ / Voter ID ಹಾಗೂ ಇತರ ಸೇವೆಗಳು.

**ಸಮಾಜ ಬಾಂಧವರೆಲ್ಲರೂ ಈ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕಾಗಿ ವಿನಂತಿ.**

**"ಪ್ರತಿಯೊಬ್ಬ ರಕ್ತದಾನಿಯು ಜೀವ ರಕ್ಷಕ"**

ಸಮಾಜ ಸೇವೆಗಿಂತ ಮಿಗಿಲಾದ ಸೇವೆ ಮತ್ತೊಂದಿಲ್ಲ. ಒಬ್ಬ ವ್ಯಕ್ತಿಯಿಂದ ಒಂದು ಯೂನಿಟ್ ರಕ್ತವು ಮೂರು ಜನರ ಜೀವವನ್ನು ಉಳಿಸಲು ಸಹಾಯ ಮಾಡುತ್ತದೆ. ರಕ್ತದಾನ ಮಾಡುವುದು ಮಾನವನ ಕರ್ತವ್ಯ ಎಂದು ಭಾವಿಸುವುದು ಬಹಳ ಮುಖ್ಯ.

**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ಸಬನ್ ಶೆಟ್ಟಿ, ಗುಡಿಬೆಟ್ಟು**
ಸಂಚಾಲಕರು

ಸಮಾಜ ಸೇವಾ ಸಮಿತಿ

**ಸುದೀಪ್ ನಾಯಕ್**
ಚೇರ್‌ಪರ್ಸನ್

**ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಸಮಾಜ ಸೇವಾ ಸಮಿತಿ ಸದಸ್ಯರು**

**ರಕ್ತದಾನಿಗಳ ನೋಂದಾವಣೆಗಾಗಿ : ವಿನೋದ್ ಶೆಟ್ಟಿ : 89707 20484**
**ಸಿ.ಇ.ಜಿ. ಮತ್ತು ಸಿ.ಎಸ್.ಸಿ. ಕೇಂದ್ರದ ಸೌಲಭ್ಯಗಳ ವಿವರಗಳಿಗಾಗಿ : ಪ್ರಶಾಂತ್ ಶೆಟ್ಟಿ : 90086 20555**

# *INVESTITURE CEREMONY 2022- 23*

**“IF YOUR ACTIONS CREATE A LEGACY THAT INSPIRES OTHERS TO DREAM MORE, LEARN MORE, DO MORE AND BECOME, THEN YOU ARE AN EXCELLENT LEADER”.**




A solemn function marked the investiture ceremony of theBunts’Sangha RNS Vidyaniketan & Composite PU College at The Radhabai Thimmappa Bhandary Auditorium, Bengaluru on 13th October, 2022

One of the most prestigious ceremonies of the institution was graced by Shri.Murlidhar Hegde, President Bunts’ Sangha, Bengaluru. The event was also graced by Shri.Yesudas, Principal, Bunts’ Sangha RNS Vidyaniketan & Composite PU College, Smt.Anju R Naik, Vice- principal, Bunts’ Sangha RNS Vidyaniketan & Composite PU College, The heads of the institution, the teaching and the non -teaching staff and the students.




The ceremony began with a soulful rendition of a devotional song rendered by the school choir that filled the air with a sense of purity and calm. It was followed by the welcoming of the dignitaries by Manvi Manjunath, the student of PU College of the institution and the ceremonial lighting of the holy lamp, marking a significant embarkment upon a new journey of being leaders.



It was a proud moment for all to witness the enthralling ceremony of conferring of the badges and the bestowing of the flags by Shri. Murlidhar Hegde, President Bunts’ Sangha, Bengaluru to the newly elected Head Boy, Head girl, The Secretary of the sports, Cultural clubs Math & IT Club, Art & Craft, Nature club, The Assistant Head Boy, Assistant Head girl, the House Captains, Vice- Captains and the Prefects of the ICSE, CBSE and the PU Stream of the institution, theBand leaders of the CBSE Stream and Class Representatives of the PU Stream.

The newly elected members of the student’s council, donning the mantle of accountability,

after receiving the prestigious badges, took an oath administered by Smt. Anju R Naik, Vice-principal Bunts' Sangha RNS Vidyaniketan & Composite PU College and pledged to work earnestly to uphold the honour, glory and dignity of the institution.

Shri. Murlidhar Hegde, President Bunts' Sangha, Bengaluru in his address, congratulated the new leaders and advised them to be impartial and honest in discharging their duties. He also exhorted them that with position comes responsibility towards themselves, their institution and peers and their struggles help them to achieve newer heights always.


Shri.Yesudas, Principal, Bunts' Sangha RNS Vidyaniketan & Composite PU College, in his speech congratulated the new leaders and reminded them the importance of becoming good citizens of the nation by devoting themselves in the growth of the nation not just economically but ethically. He advised them to be role models and lead by example of godly wisdom.

The newly elected Head Boy, Akash Pujar, ICSE Stream, Parinika Holla, CBSE Stream and Sharan Kulkarni, The Head Boy of the PU Stream in their maiden speech expressed their deepest gratitude to all in electing them as the leaders. They also vowed to keep up to the faith bestowed upon them and assured to strive with all their undeterred determination and hard work in taking the fame of the institution to much greater heights.



The event also witnessed the honouring of the Scouts & Guides students who won the first prize at the Geetha Gayana Competition, District Level Competition and brought laurels to the institution.

The programme concluded with a formal vote of thanks delivered by Shriya R Shetty and the singing of the National Anthem. It was a memorable occasion for all the young leaders as they look forward to a new eventful and enriching academic year ahead.



ಶ್ರೇಯಾ ರಮೇಶ್ ಶೆಟ್ಟಿ

## ಅಭಿನಂದನೆಗಳು

ದಿನಾಂಕ 30.10.2022ರಂದು ತಮಿಳುನಾಡಿನಲ್ಲಿ ನಡೆದ ಬಾಲಕಿಯರ ರಾಷ್ಟ್ರೀಯ ವಾಲಿಬಾಲ್ ಪಂದ್ಯಾವಳಿಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿದ್ದ ಬೆಂಗಳೂರು ಬಂಟರ ಸಂಘದ ಸದಸ್ಯರಾದ ಶ್ರೀಮತಿ ಪುಷ್ಪಾ ರಮೇಶ್ ಶೆಟ್ಟಿ ಮತ್ತು ತೀರ್ಥಹಳ್ಳಿ ಶ್ರೀ ರಮೇಶ್ ಶೆಟ್ಟಿಯವರ ಸುಪುತ್ರಿಯಾದ ಕುಮಾರಿ ಶ್ರೇಯಾ ರಮೇಶ್ ಶೆಟ್ಟಿಯವರ ತಂಡ ಪ್ರಥಮ ಬಹುಮಾನವನ್ನು ಪಡೆದು ರಾಜ್ಯಕ್ಕೆ ಕೀರ್ತಿ ತಂದಿದ್ದಾರೆ. ಬೆಂಗಳೂರು ಬಂಟರ ಸಂಘದ ಪರವಾಗಿ ಇವರಿಗೆ ಅಭಿನಂದನೆಗಳು.

# ದೀಪಾವಳಿ ಸಂಭ್ರಮ

ಬೆಂಗಳೂರು ಬಂಟರ ಸಂಘದ ಕಾರ್ಯಕ್ರಮಗಳಲ್ಲಿ ದೀಪಾವಳಿ ಸಂಭ್ರಮಾಚರಣೆ ವಿಶೇಷ ಮಹತ್ವವನ್ನು ಪಡೆದು ಪ್ರತೀ ವರ್ಷದಂತೆ ದಿನಾಂಕ 30.10.2022ರಂದು ಸಡಗರ ಸಂಭ್ರಮದೊಂದಿಗೆ ಜರುಗಿತು.

ಸಾಂಸ್ಕೃತಿಕ ಸಮಿತಿಯ ಚೇರ್‌ಪರ್ಸನ್ ಶ್ರೀಮತಿ ಜಯಶ್ರೀ ಸಿ. ರೈಯವರು ಸಂಘದ ಅಧ್ಯಕ್ಷರನ್ನು ಹಾಗೂ ಪದಾಧಿಕಾರಿಗಳನ್ನು, ಕಾರ್ಯಕಾರಿ ಸಮಿತಿ ಸದಸ್ಯರನ್ನು ಹಾಗೂ ಸರ್ವ ಸದಸ್ಯರನ್ನು ಪ್ರೀತಿ ಪೂರ್ವಕವಾಗಿ ಸ್ವಾಗತಿಸಿದರು. ಪ್ರಥಮದಲ್ಲಿ "ಪ್ರತಿಬಿಂಬ" ನಾಮಾಂಕಿತ ಹಳೆಬೇರು ಹೊಸ ಚಿಗುರು, ಸಮ್ಮಿಲನದೊಂದಿಗೆ ನಮ್ಮ ಸಂಸ್ಕೃತಿಯ ಆಚಾರ ವಿಚಾರಗಳ ನಾಡು ನುಡಿಗಳನ್ನು ಯುವ ಪೀಳಿಗೆಗೆ ಪರಿಚಯಿಸುವ ಕಿರು ಪ್ರಯತ್ನದಲ್ಲಿ ಯಶಸ್ಸು ಪ್ರಶಂಸೆಗೆ ಪಾತ್ರವಾಯಿತು. ನಿರೂಪಣೆ ಸಮೀರಾ ಬೆಳುವಾಯಿ, ತೀರ್ಪುಗಾರರಾಗಿ ಚಲನಚಿತ್ರ ನಟ, ನಿರ್ದೇಶಕರಾದ ಶ್ರೀ ಶಿವಧ್ವಜ್, ಹಿರಿತೆರೆ ಕಿರಿತೆರೆ ನಟಿ ಶ್ರೀಮತಿ ಜ್ಯೋತಿ ರೈಯವರು ಉಪಸ್ಥಿತರಿದ್ದರು.




ದೀಪಾವಳಿ ಬೆಳಕಿನ ಹಬ್ಬ. ಸಾಂಕೇತಿಕ ಆಚರಣೆಗಳ ಅನಾವರಣದ ಅಂಗವಾಗಿ ಬಲೀಂದ್ರ ಪೂಜೆ, ತುಳಸೀ ಪೂಜೆ, ಗೋಪೂಜೆ ಮತ್ತು ದೈವಗಳಿಗೆ ಪರ್ವ ಪೂಜೆಯನ್ನು ಗೌರವಾನ್ವಿತ ಅತಿಥಿಗಳು, ಪದಾಧಿಕಾರಿಗಳು, ಸದಸ್ಯರನ್ನೊಳಗೊಂಡು ವಿಜ್ರಂಭಣೆಯಿಂದ ನೆರವೇರಿಸಲಾಯಿತು. ಗೌರವಾನ್ವಿತ ಅತಿಥಿಗಳನ್ನು ಸಭಾಂಗಣದ ಮುಂಭಾಗದಿಂದ ಸಂಘದ ಮಹಿಳಾ ಸದಸ್ಯರು ಹಾಗೂ ಮಕ್ಕಳು ವಿಶೇಷ ದೀಪಗಳು ಪುರಾತನ ಹಾಗೂ ಆಧುನಿಕ ದೀಪಗಳ ಪ್ರಜ್ವಲನದೊಂದಿಗೆ, ವಾದ್ಯ ಘೋಷಗಳೊಂದಿಗೆ ಕರೆತರಲಾಯಿತು.

ಸುಂದರ ಸಂಜೆಯ ಸಭಾ ಕಾರ್ಯಕ್ರಮ ನಿಗದಿತ ಸಮಯ 6.30ಕ್ಕೆ ಪ್ರಾರಂಭ, ಸಭಾಕಾರ್ಯಕ್ರಮದ ನಿರೂಪಕಿ ಶ್ರೀಮತಿ ರೇವತಿ ಶೆಟ್ಟಿಯವರು ಅತಿಥಿ ಅಭ್ಯಾಗತರನ್ನು ಹಾಗೂ ಪದಾಧಿಕಾರಿಗಳನ್ನು ವೇದಿಕೆಗೆ ಬರಮಾಡಿಕೊಳ್ಳುವುದರೊಂದಿಗೆ ಚಾಲನೆ ನೀಡಲಾಯಿತು. ಸಂಘದ ಮಕ್ಕಳಿಂದ ಪ್ರಾರ್ಥನೆ, ಸಂಘದ ಗೌರವ ಕಾರ್ಯದರ್ಶಿ ಶ್ರೀ ಆನಂದರಾಮ ಶೆಟ್ಟಿಯವರು ವೇದಿಕೆಯ ಮೇಲೆ ವಿರಾಜಮಾನರಾಗಿದ್ದ ನಿಟ್ಟೆ ಡೀಮ್ಡ್ ಯೂನಿವರ್ಸಿಟಿಯ ಕುಲಪತಿಗಳಾದ ಶ್ರೀ ಎನ್. ವಿನಯ್ ಹೆಗ್ಡೆ, ಮಾಜಿ ಶಾಸಕರು ಹಾಗೂ ಬಸ್ರೂರು ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಆಡಳಿತ ಧರ್ಮದರ್ಶಿಗಳಾದ ಶ್ರೀ ಬಿ. ಅಪ್ಪಣ್ಣ ಹೆಗ್ಡೆ, ಗೌರವಾರ್ಪಣೆ ಸ್ವೀಕರಿಸಲಿರುವ ಖ್ಯಾತ ಹೃದ್ರೋಗ ತಜ್ಞರಾದ ಡಾ. ಶ್ರೀಕಾಂತ್ ಶೆಟ್ಟಿ, ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿ, ಬೆಂಗಳೂರು ಬಂಟರ ಸಂಘದ ಅಧ್ಯಕ್ಷರಾದ ಶ್ರೀ ಎಂ. ಮುರಲೀಧರ ಹೆಗ್ಡೆ ಹಾಗೂ ಪದಾಧಿಕಾರಿಗಳನ್ನು ಮತ್ತು ನೆರೆದ ಸಭಿಕರನ್ನು ಸ್ವಾಗತಿಸಿದರು.

ಸಂಘದ ಬಾಲಕ ವಾಮನ ರೂಪ ತಳೆದು ಸಭಾಂಗಣದಿಂದ ವೇದಿಕೆಗೆ ದೀಪದೊಂದಿಗೆ ಹಾಗೂ ಐವರು ಮುತ್ತೈದೆಯರು ಬಿಂದಿಗೆಯಲ್ಲಿ ನೀರನ್ನು ವೇದಿಕೆಗೆ ತಂದು ಹಂಡೆಗೆ ತುಂಬಿಸಿ ಭತ್ತದ ಹೊಲಿ ರಾಶಿ ಪೂಜೆಯೊಂದಿಗೆ ಎಂಬಂತೆ ದೀಪ ಪ್ರಜ್ವಲನೆಯನ್ನು ವೇದಿಕೆಯ ಮೇಲಿದ್ದ ಗಣ್ಯರು ನೆರವೇರಿಸಿದರು. ನಿಕಟ ಪೂರ್ವ ಅಧ್ಯಕ್ಷರನ್ನು ಅವರು ಸಲ್ಲಿಸಿರುವ ಅಪಾರ ಸೇವೆಯ ಕಿರುಪರಿಚಯದೊಂದಿಗೆ ಪರಿಚಯಿಸುತ್ತಾ ಗೌರವಾರ್ಪಣೆಯಲ್ಲಿ ಶ್ರೀ ಬಿ. ಅಪ್ಪಣ್ಣ ಹೆಗ್ಡೆ, ಶ್ರೀ ಎನ್. ವಿನಯ್ ಹೆಗ್ಡೆ, ಡಾ. ಪ್ರಶಾಂತ್ ಶೆಟ್ಟಿ, ಶ್ರೀ ಎಂ. ಮುರಲೀಧರ ಹೆಗ್ಡೆಯವರು ಇತರ ಪದಾಧಿಕಾರಿಗಳ ಸಮ್ಮುಖದಲ್ಲಿ ಸಕಲ ಗೌರವಗಳೊಂದಿಗೆ ನಡೆಸಲಾಯಿತು. ಗೌರವ ಸ್ವೀಕರಿಸಿ ಶ್ರೀ ಉಪೇಂದ್ರ ಶೆಟ್ಟಿಯವರು ನಡೆದು ಬಂದ ದಾರಿಯ ಇಣುಕು ನೋಟ, ಮುಂದಿನ ಹೊಸತನದ ಹಾದಿಯ ಯೋಚನೆಗಳು, ಯೋಜನೆಗಳನ್ನು ನಡೆಸಿಕೊಂಡು ಸಂಘದ ಘನತೆ ಗೌರವಗಳನ್ನು ಹೆಚ್ಚಿಸಬೇಕೆಂದು ವಿನಂತಿಸಿದರು.

ಸಮಾರಂಭದಲ್ಲಿ ಕೇಂದ್ರಬಿಂದು "ದಿ. ಶ್ರೀ ಕೆ. ಶ್ರೀನಿವಾಸ ಆಳ್ವ ಸ್ಮಾರಕ ಸಾಮಾಜಿಕ ಸೇವಾ ಪ್ರಶಸ್ತಿ" ವಿಜೇತ ಶ್ರೀ ಬಿ. ಅಪ್ಪಣ್ಣ ಹೆಗ್ಡೆಯವರ ಪುರಸ್ಕಾರ. ಹಳ್ಳಿಯ ಕೊಳ್ಳಿಯಾಗಿ, ಕಡಲತೀರದ ಬಸ್ರೂರು ಇವರ ಕಾರ್ಯಕ್ಷೇತ್ರ. ಶಾಸಕರಾಗಿ, ಕೊಲ್ಲೂರು, ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಬಸ್ರೂರಿನ ಧರ್ಮದರ್ಶಿಗಳಾಗಿ, ಸಮಾಜಮುಖಿ ಕಾರ್ಯಕ್ರಮಗಳು ಬಂಟರ ಸಂಘದ ಒಡನಾಡಿ ಹಿರಿಯ ಜೀವ ಅಪ್ಪಣ್ಣ ಹೆಗ್ಡೆಯವರಿಗೆ ತುಂಬಿದ ಸಭಾಂಗಣದ ಕರತಾಡನದೊಂದಿಗೆ ಪ್ರಶಸ್ತಿ ಪ್ರಧಾನವಾಯಿತು. ಸನ್ಮಾನಕ್ಕೆ ಉತ್ತರಿಸುತ್ತಾ ಆಳ್ವರು ಮತ್ತು ಹೆಗ್ಡೆಯವರು ಮದ್ರಾಸ್‌ನಲ್ಲಿ ವಿದ್ಯಾರ್ಥಿಗಳಾಗಿದ್ದ ದಿನಗಳನ್ನು ನೆನಪಿಸಿಕೊಂಡರು.

ತನ್ನ ಆಗ್ರಹ ಪೂರ್ವ ಭಾಷಣದಲ್ಲಿ ಅಳಿಯ ಕಟ್ಟು ಅಂದು ಇಂದು, ಸಂಪ್ರದಾಯಗಳು ಆಚರಣೆ, ಒಡನಾಟ, ಬದುಕಿನ ಹೋರಾಟದ ಒಳನೋಟವನ್ನು ನಿರರ್ಗಳವಾಗಿ ನೀಡುತ್ತಾ ಸಾರ್ಥಕತೆ ಮೆರೆದರು. ಹಿರಿಯ ಬಂಟನಿಗೆ ಬೆಂಗಳೂರು ಬಂಟರ ಸಂಘ ಸಮಯೋಚಿತವಾಗಿ ಸನ್ಮಾನಿಸಿ ಧನ್ಯತೆ ಪಡೆಯಿತು. ಸಮಾರಂಭದಲ್ಲಿ ಸಕ್ರ ವರ್ಲ್ಡ್ ಆಸ್ಪತ್ರೆಯ ಖ್ಯಾತ ವೈದ್ಯ ಶ್ರೀಕಾಂತ್ ಶೆಟ್ಟರಿಗೆ ಗೌರವಾರ್ಪಣೆ ಸಮರ್ಪಿಸಲಾಯಿತು. ಸನ್ಮಾನ ಸ್ವೀಕರಿಸಿ ಮಾತನಾಡುತ್ತಾ ಶೆಟ್ಟರು ಯುವ ಜನತೆ ಆರೋಗ್ಯದ ಕಡೆ ಗಮನ ಹರಿಸಬೇಕು, ನಿಯಮಿತ ವ್ಯಾಯಾಮ ಹಾಗೂ ಆಹಾರ ಪದ್ಧತಿಗಳನ್ನು ಮೈಗೂಡಿಸಬೇಕೆಂಬ ಸಲಹೆ ನೀಡಿದರು. ಬಂಟರ ಸಂಘದ ಗೌರವಾರ್ಪಣೆಯನ್ನು ಶ್ಲಾಘಿಸುತ್ತಾ ಜನಪರ ಕಾರ್ಯಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಶೈಕ್ಷಣಿಕ ಕ್ಷೇತ್ರ ಹಾಗೂ ಉದ್ಯಮ ಕ್ಷೇತ್ರದಲ್ಲಿ ಕ್ರಾಂತಿಯನ್ನುಂಟು ಮಾಡಿದ, ಮುಖ್ಯ ಅತಿಥಿಗಳಾದ ಡಾ. ಶ್ರೀ ಎನ್. ವಿನಯ್ ಹೆಗ್ಡೆಯವರು ಬೆಂಗಳೂರು ಬಂಟರ ಸಂಘದ ಸನ್ಮಾನವನ್ನು ಸ್ವೀಕರಿಸಿ ಮಾತನಾಡುತ್ತಾ ತನ್ನ ಜೀವನದ ಯಶೋಗಾಥೆಯನ್ನು ಬಿಚ್ಚಿಡುತ್ತಾ ಬದುಕಿನ ಸುಮಧುರ ಕ್ಷಣಗಳನ್ನು ಹಂಚಿಕೊಳ್ಳುತ್ತಾ ಸ್ವಪ್ರತಿಭೆ, ಕಷ್ಟಕರ ದುಡಿಮೆ, ಸಮಯ ಪ್ರಜ್ಞೆ ಜೊತೆಗೆ ಹಿಂದೂ ಧರ್ಮದ ಧಾರ್ಮಿಕ ಪ್ರಜ್ಞೆಗೆ ಒತ್ತು ನೀಡಿದರು. ಬೆಂಗಳೂರು ಬಂಟರ ಸಂಘದ ಕಾರ್ಯಕ್ರಮಗಳು, ಬೆಳವಣಿಗೆಗೆ ಶ್ಲಾಘನೆ ವ್ಯಕ್ತಪಡಿಸಿದರು.





ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶ್ರೀ ಎಂ. ಮುರಲೀಧರ ಹೆಗ್ಡೆಯವರು ಮುಂದಿನ ಯೋಜನೆಗಳ ಬಗ್ಗೆ ಮುಂದಕ್ಕೆ ತಿಳಿಸುವುದಾಗಿ ಸಮಾರಂಭದ ಯಶಸ್ಸಿಗೆ ಶ್ರಮಿಸಿದ ಅತಿಥಿ ಅಭ್ಯಾಗತರಿಗೆ ವಂದನೆ ತಿಳಿಸಿ ತಮ್ಮ ಮಾತನ್ನು ಮುಗಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ಜೊತೆ ಕಾರ್ಯದರ್ಶಿ ಶ್ರೀಮತಿ ಶ್ಯಾಮಲಾ ಶೆಟ್ಟಿಯವರು ಧನ್ಯವಾದ ಸಮರ್ಪಿಸಿದರು. ಮನರಂಜನಾ ಕಾರ್ಯಕ್ರಮದಲ್ಲಿ ದೀಪಾವಳಿ ಹಬ್ಬಕ್ಕೆ ಪೂರಕವಾಗಿ ಆಯ್ದುಕೊಂಡ ಕಾರ್ತೀಸ್ ಪರ್ಫಾರ್ಮಿಂಗ್ ಆರ್ಟ್ಸ್ ಮತ್ತು ಸಂಘದ ಸದಸ್ಯರಿಂದ ಸುಮಾರು 30ಕ್ಕೂ ಮಿಕ್ಕಿದ ಕಲಾವಿದರಿಂದ ಲಕ್ಷ್ಮಣ ಕಥಾವನ್ನು ನೃತ್ಯ ರೂಪಕದೊಂದಿಗೆ ವಿಶೇಷ ಅಲಂಕೃತ ದೀಪ ಬೆಳಕಿನ ವಿನ್ಯಾಸದೊಂದಿಗೆ ಸಾದರ ಪಡಿಸಲಾಯಿತು. ಸಭಾಂಗಣದಲ್ಲಿ ಸಭಿಕರು ಮಂತ್ರಮುಗ್ಧರಾಗಿ ದೃಶ್ಯಾವಳಿಗಳನ್ನು ವೀಕ್ಷಿಸುತ್ತಾ ರೂಪಕದ ಬಗ್ಗೆ ಶ್ಲಾಘನೆಯನ್ನು ವ್ಯಕ್ತಪಡಿಸಿದರು.

ಸಮಾರಂಭದಲ್ಲಿ ನಮ್ಮ ಸದಸ್ಯ ಶ್ರೀ ಸತೀಶ್ ಶೆಟ್ಟಿಯವರ ಪುತ್ರ ಈ ಬಾರಿಯ ಡಾನ್ಸ್ ಕರ್ನಾಟಕ ಡಾನ್ಸ್‌ನ ಪ್ರಥಮ ಬಹುಮಾನ ಪಡೆದ ಸದ್ವಿನ್ ಶೆಟ್ಟಿಗೆ ಸ್ಮರಣಿಕೆ ನೀಡಿ ಗೌರವಿಸಲಾಯಿತು. ದೀಪಾವಳಿ ಸಂಭ್ರಮಾಚರಣೆಯಲ್ಲಿ ಕೈ ಜೋಡಿಸಿದ ಪ್ರಾಯೋಜಕರು ಭೀಮ ಜ್ಯುವೆಲ್ಲರ್ಸ್, ಬ್ಯಾಂಕ್ ಆಫ್ ಬರೋಡ, ಶ್ರೀ ಇರ್ಮಾಡಿ ಜಯಪ್ರಸಾದ್ ಶೆಟ್ಟಿ, ಶ್ರೀ ಶಿವರಾಮ ಹೆಗ್ಡೆ, ಶ್ರೀ ಎಂ. ಮುರಲೀಧರ ಹೆಗ್ಡೆ, ಶ್ರೀ ದೀಪಕ್ ಶೆಟ್ಟಿ, ಸಿ.ಎ. ಕಿಶೋರ್ ಶೆಟ್ಟಿ, ಶ್ರೀಮತಿ ರೇಖಾ ಜೆ. ಶೆಟ್ಟಿ, ಐಡಿಯಲ್ ಐಸ್ ಕ್ರೀಂ, ಮತ್ಸ್ಯದರ್ಶಿನಿ, ಶ್ರೀ ಕಿರಣ್ ಕುಮಾರ್ ಶೆಟ್ಟಿ ಎಂ. ಇವರೆಲ್ಲರಿಗೂ ಸ್ಮರಣಿಕೆ ನೀಡಿ ಗೌರವಿಸಲಾಯಿತು.

ಸಹಭೋಜನದೊಂದಿಗೆ ಸರ್ವ ಸದಸ್ಯರ ಮೆಚ್ಚುಗೆಗೆ ಪಾತ್ರವಾದ ದೀಪಾವಳಿ ಸಮಾರಂಭ ಮುಕ್ತಾಯವಾಯಿತು.

**ಮಹೇಶ್ ಶೆಟ್ಟಿ**
ಸಂಚಾಲಕರು, ಸಾಂಸ್ಕೃತಿಕ ಸಮಿತಿ

**ಜಯಶ್ರೀ ಸಿ. ರೈ**
ಚೇರ್‌ಪರ್ಸನ್, ಸಾಂಸ್ಕೃತಿಕ ಸಮಿತಿ



## *Academic Excellence Congratulations*

## SSLC / 10th Std. Toppers

**Ashish G. Shetty**
S/o Ganesh S. Shetty & Bhavani G. Shetty
**SSLC : 95.4% | Science : 100**
**Max Muller Public School, Bengaluru**

# "ವೈದ್ಯಕೀಯ ಮತ್ತು ವಿಮೆ ವಿಭಾಗ"

## "ಆರೋಗ್ಯ ತಪಾಸಣಾ ಶಿಬಿರ" ಮತ್ತು

## ಸರಕಾರದ ವಿವಿಧ ಯೋಜನೆಗಳ ಅಡಿಯಲ್ಲಿ "ಉಚಿತ ಚಿಕಿತ್ಸಾ ಸೌಲಭ್ಯಗಳು"

**ದಿನಾಂಕ : 03.12.2022, ಶನಿವಾರ । ಸ್ಥಳ : ಬಂಟರ ಸಂಘದ ಆವರಣ**

**ನಗರದ ಪ್ರತಿಷ್ಠಿತ ಆಸ್ಪತ್ರೆಗಳ ಸಹಯೋಗದೊಂದಿಗೆ :**

- ಹೃದಯ ತಪಾಸಣೆ
- ಕ್ಯಾನ್ಸರ್ ತಪಾಸಣೆ
- ರಕ್ತ ತಪಾಸಣೆ
- ಕೃತಕ ಕೈ-ಕಾಲು ಜೋಡಣೆ
- 5 ವರ್ಷದ ಒಳಗಿನ ಮಕ್ಕಳಿಗೆ ಕಿವುಡುತನ ತಪಾಸಣೆ ಮತ್ತು ಚಿಕಿತ್ಸೆ

**ಭಾಗವಹಿಸುವ ಪ್ರತಿಷ್ಠಿತ ಆಸ್ಪತ್ರೆಗಳು :**

- ಕಿದ್ವಾಯಿ ಮೆಮೋರಿಯಲ್ ಇನ್ಸ್ಟಿಟ್ಯೂಟ್ ಆಫ್ ಆಂಕಾಲಜಿ
- ಫೋರ್ಟಿಸ್ ಹಾಸ್ಪಿಟಲ್, ನಾಗರಭಾವಿ
- ಮಾನಸ ಕಾಕ್ಲೀಯರ್ ಇಂಪ್ಲ್ಯಾಂಟ್ ಮತ್ತು ಇ.ಎನ್.ಟಿ. ಸೆಂಟರ್
- ಸ್ಪೈನ್‌ಕೇರ್ ಮತ್ತು ಆರ್ಥೋಕೇರ್ ಹಾಸ್ಪಿಟಲ್
- ಎಸೆನ್ಶಿಯಲ್ ಹಾಸ್ಪಿಟಲ್ ಮತ್ತು ಇತರ ಪ್ರತಿಷ್ಠಿತ ಆಸ್ಪತ್ರೆಗಳು

**ಸಮಾಜ ಬಾಂಧವರೆಲ್ಲರೂ ಈ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕಾಗಿ ವಿನಂತಿ.**

**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ಡಾ. ಸವಿತಾ ರೈ**
ಸಂಚಾಲಕರು

**ಕೆ. ನಿರಂಜನ್ ಶೆಟ್ಟಿ**
ಚೇರ್‌ಪರ್ಸನ್

**ವೈದ್ಯಕೀಯ ಮತ್ತು ವಿಮೆ ವಿಭಾಗ**

**ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ವೈದ್ಯಕೀಯ ವಿಭಾಗ ಮತ್ತು ವಿಮೆ ವಿಭಾಗ ಸದಸ್ಯರು**

---



## ಅಭಿನಂದನೆಗಳು

ಯುಎಇನಲ್ಲಿ ನಡೆದ ಅಂತರಾಷ್ಟ್ರೀಯ ಕಿವುಡರ ಟಿ-20 ಕ್ರಿಕೆಟ್ ಚಾಂಪಿಯನ್‌ಶಿಪ್‌ನಲ್ಲಿ DICC T-20 Champions Trophy 2022 ವಿಜೇತ ಭಾರತ ಕ್ರಿಕೆಟ್ ತಂಡದ ಸದಸ್ಯ, ಕರ್ನಾಟಕದಿಂದ ಆಯ್ಕೆಯಾದ ಏಕಮಾತ್ರ ಆಟಗಾರ, ಕುಂದಾಪುರದ ಕುವರ ಶ್ರೀ ಪೃಥ್ವಿರಾಜ್ ಶೆಟ್ಟಿ, ಹುಂಚನಿ, ಗೋಳಿಹೊಳೆ ಇವರಿಗೆ ಬಂಟರ ಸಂಘದ ಪರವಾಗಿ ಹಾರ್ದಿಕ ಅಭಿನಂದನೆಗಳು.

# ಬಂಟರ ಸಂಘ ಬೆಂಗಳೂರು

## ಕ್ರೀಡಾ ವಿಭಾಗ

## ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾಕೂಟ – 2022–23

**ಆತ್ಮೀಯ ಸದಸ್ಯರೇ,**

2022–23ನೇ ಸಾಲಿನ 'ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾಕೂಟ'ಕ್ಕೆ ತಮ್ಮೆಲ್ಲರನ್ನೂ ಆತ್ಮೀಯವಾಗಿ ಆಹ್ವಾನಿಸುತ್ತಿದ್ದೇವೆ. ಸದಸ್ಯರೆಲ್ಲರೂ ಕ್ರೀಡಾ ಮನೋಭಾವದಿಂದ ತಮ್ಮ ಕುಟುಂಬ ಸದಸ್ಯರೊಂದಿಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕ್ರೀಡಾಕೂಟವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿಸುತ್ತಿದ್ದೇವೆ.

## ಕ್ರೀಡಾಕೂಟದ ವಿವರ

| | | | |
|---|---|---|---|
| ನವೆಂಬರ್ 13 ಭಾನುವಾರ | ಚೆಸ್, ಕೇರಂ ಹಾಗೂ ಟೆನ್ನಿಕ್ವಾಟ್ | ಬೆಳಿಗ್ಗೆ 9.00ಕ್ಕೆ | ಬೆಂಗಳೂರು ಬಂಟರ ಸಂಘದ ಸಂಕೀರ್ಣ |
| ಡಿಸೆಂಬರ್ 10 ಶನಿವಾರ | ವಾಲಿಬಾಲ್ | ಮಧ್ಯಾಹ್ನ 2.00ಕ್ಕೆ | ಬೆಂಗಳೂರು ಬಂಟರ ಸಂಘದ ಸಂಕೀರ್ಣ |
| ಜನವರಿ 7 ಮತ್ತು 8 ಶನಿವಾರ ಮತ್ತು ಭಾನುವಾರ | ಕ್ರಿಕೆಟ್ | ಬೆಳಿಗ್ಗೆ 8.00ಕ್ಕೆ | ಹೆಚ್.ಎಂ.ಟಿ. ಮೈದಾನ, ಜಾಲಹಳ್ಳಿ |
| ಜನವರಿ 8 ಭಾನುವಾರ | ತ್ರೋಬಾಲ್ | ಬೆಳಿಗ್ಗೆ 8.00ಕ್ಕೆ | ಹೆಚ್.ಎಂ.ಟಿ. ಮೈದಾನ, ಜಾಲಹಳ್ಳಿ |

ಬೆಂಗಳೂರು ಬಂಟರ ಸಂಘದ 2022–23ನೇ ಸಾಲಿನ ಎಲ್ಲಾ ವಾರ್ಷಿಕ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಇಚ್ಚಿಸುವವರು ಕಡ್ಡಾಯವಾಗಿ ಸಂಘದ ಸದಸ್ಯರಾಗಿದ್ದು ಸಮಾಜ ಬಾಂಧವರೆಲ್ಲರೂ ಸಹಕರಿಸಬೇಕಾಗಿ ವಿನಂತಿ.

**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ನಿತ್ಯರಂಜನ್ ಹೆಗ್ಡೆ**
ಸಂಚಾಲಕರು, ಕ್ರೀಡಾ ಸಮಿತಿ
ಮೊ : 9945685277

**ಕಿರಣ್ ಕುಮಾರ್ ಶೆಟ್ಟಿ ಎಂ.**
ಚೇರ್‌ಪರ್ಸನ್, ಕ್ರೀಡಾ ಸಮಿತಿ
ಮೊ : 9945233387

**ಸೂಚನೆ :**

- ವಾಲಿಬಾಲ್ ಪಂದ್ಯಾವಳಿಗೆ ಹೆಸರು ನೋಂದಾಯಿಸಲು ಕೊನೆಯ ದಿನಾಂಕ : 05.12.2022ನೇ ಸೋಮವಾರ ಸಂಜೆ 5.30ಕ್ಕೆ
- ಕ್ರಿಕೆಟ್ : ಹೆಸರು ನೋಂದಾಯಿಸಲು ಕೊನೆಯ ದಿನಾಂಕ : 25.12.2022ನೇ ಆದಿತ್ಯವಾರ ಸಂಜೆ 5.30ಕ್ಕೆ.
- ತ್ರೋಬಾಲ್‌ಗೆ ಹೆಸರು ನೋಂದಾಯಿಸಲು ಕೊನೆಯ ದಿನಾಂಕ : 29.12.2022ನೇ ಆದಿತ್ಯವಾರ ಸಂಜೆ 5.30ಕ್ಕೆ.

## ಹೆಚ್ಚಿನ ಮಾಹಿತಿಗಾಗಿ ಕ್ರೀಡಾ ಸಮಿತಿಯ ಈ ಕೆಳಕಂಡ ಸದಸ್ಯರನ್ನು ಸಂಪರ್ಕಿಸಬಹುದು.

| | | | | | |
|---|---|---|---|---|---|
| ಅಖಿಲಾ ಶೆಟ್ಟಿ | 8746924286 | ಅಶ್ವಿನಿ ಶೆಟ್ಟಿ | 7795199583 | ದೀಕ್ಷಾ ಶೆಟ್ಟಿ | 7022089750 |
| ಹರೀಶ್ ಶೆಟ್ಟಿ | 9900133200 | ಕುಶಲ್ ಶೆಟ್ಟಿ | 9448018245 | ನವೀನ್ ಶೆಟ್ಟಿ | 9844226700 |
| ಪ್ರವೀಣ್ ಶೆಟ್ಟಿ | 9880546073 | ಪ್ರೇಮಾನಂದ ಶೆಟ್ಟಿ | 8123035590 | ರಾಜೇಶ್ ಶೆಟ್ಟಿ | 9880389197 |
| ರಾಮಕೃಷ್ಣ ಶೆಟ್ಟಿ | 9980225041 | ರತನ್ ಶೆಟ್ಟಿ | 9880882852 | ಸಂತೋಷ್ ಶೆಟ್ಟಿ ಬಿ. | 9663379394 |
| ಸಂತೋಷ್ ಶೆಟ್ಟಿ | 9880866754 | ಮಹೇಂದ್ರ ಶೆಟ್ಟಿ | 7019321009 | ಸುದರ್ಶನ್ ರೈ | 9902899123 |
| ಸುಕೇಶ್ ಶೆಟ್ಟಿ | 9845953035 | ಸುಕುಮಾರ್ ಶೆಟ್ಟಿ | 9686199225 | ಸುನೀಲ್ ಶೆಟ್ಟಿ | 7829294343 |
| ಉತ್ತಮ್ ಶೆಟ್ಟಿ | 9845188727 | ಯಶವಂತ್ ರೈ | 8792223222 | | |

## ಚೆಸ್, ಕೇರಂ (ಡಬಲ್ಸ್) ಟೆನ್ನಿಕ್ವಾಟ್

ಸ್ಥಳ : ಬಂಟರ ಸಂಘ ಸಂಕೀರ್ಣ
ದಿನಾಂಕ : 13.11.2022, ಭಾನುವಾರ, ಬೆಳಿಗ್ಗೆ 9.00ಕ್ಕೆ
ಪ್ರವೇಶ ಶುಲ್ಕ : ರೂ. 100/– ಪ್ರತಿ ಸ್ಪರ್ಧೆಗೆ

ವಿ.ಸೂ. : ಚೆಸ್ ಸ್ಪರ್ಧೆಯು 18 ವರ್ಷಕ್ಕಿಂತ ಮೇಲಿನವರಿಗೆ ಮತ್ತು ಕೆಳಗಿನವರಿಗೆ ಪ್ರತ್ಯೇಕವಾಗಿ ಇರುತ್ತದೆ.
ಟೆನಿಕ್ವಾಟ್ ಸ್ಪರ್ಧೆಯು 45 ವರ್ಷಕ್ಕಿಂತ ಮೇಲಿನವರಿಗೆ ಮತ್ತು ಕೆಳಗಿನವರಿಗೆ ಪ್ರತ್ಯೇಕವಾಗಿ, ಸಿಂಗಲ್ಸ್ ಮತ್ತು ಡಬಲ್ಸ್ ಇರುತ್ತದೆ.
ಕೇರಂ ಸ್ಪರ್ಧೆಗೆ ವಯಸ್ಸಿನ ವಯೋಮಿತಿ ಇರುವುದಿಲ್ಲ.

## ವಾಲಿಬಾಲ್

ದಿನಾಂಕ : 10.12.2022, ಶನಿವಾರ, ಮಧ್ಯಾಹ್ನ 2.00ಕ್ಕೆ
ಸ್ಥಳ : ಬಂಟರ ಸಂಘದ ಸಂಕೀರ್ಣ
ವಾಲಿಬಾಲ್‌ಗೆ ಹೆಸರು ನೋಂದಾಯಿಸಲು ಕೊನೆಯ ದಿನಾಂಕ : 05.12.2022ನೇ ಸೋಮವಾರ ಸಂಜೆ 5.30ಕ್ಕೆ
ವಾಲಿಬಾಲ್ ಪ್ರವೇಶ ಶುಲ್ಕ : ರೂ. 5000/–ಪ್ರತಿ ತಂಡಕ್ಕೆ
ಡ್ರಾ ನಿಗದಿಯನ್ನು ಸ್ಪರ್ಧೆಯ ಒಂದು ವಾರದ ಮುಂಚೆ ತಿಳಿಸಲಾಗುವುದು

**ವಾಲಿಬಾಲ್ ಪಂದ್ಯದ ನಿಯಮ :**

1. ಒಂದು ತಂಡದಲ್ಲಿ ವಿಶ್ವವಿದ್ಯಾಲಯ, ರಾಜ್ಯಮಟ್ಟ ಹಾಗೂ ಮೇಲ್ಪಟ್ಟು ಪ್ರತಿನಿಧಿಸಿರುವ ಎರಡು ಆಟಗಾರರಿಗೆ ಮಾತ್ರ ಅವಕಾಶ.
2. ಒಂದು ತಂಡದಲ್ಲಿ ಒಟ್ಟು 9 ಆಟಗಾರರು (6+3) ಮಾತ್ರ ಭಾಗವಹಿಸಬಹುದಾಗಿದೆ.
3. ಒಬ್ಬ ಆಟಗಾರನಿಗೆ ಒಂದು ತಂಡದಲ್ಲಿ ಮಾತ್ರ ಆಡಲು ಅವಕಾಶ.
4. ಬೆಂಗಳೂರು ಬಂಟರ ಸಂಘದ ಸದಸ್ಯರು ಮತ್ತು ಅವರ ಮಕ್ಕಳಿಗೆ ಮಾತ್ರ ಆಡಲು ಅವಕಾಶ. ಅಗತ್ಯ ಬಿದ್ದಲ್ಲಿ ತಂಡದ ಆಟಗಾರರ ಸದಸ್ಯತ್ವ ಧೃಡೀಕರಣ ಪುರಾವೆಯನ್ನು ಯಾವುದೇ ಸಂದರ್ಭದಲ್ಲಿ ಒದಗಿಸತಕ್ಕದ್ದು.

5. ತಂಡದಲ್ಲಿ ಸಂಘದ ಸದಸ್ಯೇತರ ಆಟಗಾರರು ಕಂಡು ಬಂದಲ್ಲಿ ಯಾವುದೇ ಹಂತದಲ್ಲಿ ಯಾವುದೇ ಮುನ್ಸೂಚನೆಯಿಲ್ಲದೇ ತಂಡವನ್ನು ಅನರ್ಹಗೊಳಿಸಲಾಗುವುದು ಹಾಗೂ ಅನರ್ಹಗೊಂಡ ತಂಡದ ಪ್ರವೇಶ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.
6. ಅಂಪೈರ್ ಹಾಗೂ ಕ್ರೀಡಾ ಸಮಿತಿಯ ತೀರ್ಮಾನವೇ ಅಂತಿಮ.
7. ಪಂದ್ಯಾವಳಿ ನಡೆಸಲು ಕನಿಷ್ಠ 6 ತಂಡಗಳು ಇದ್ದಲ್ಲಿ ಮಾತ್ರ ನಡೆಸಲಾಗುವುದು.
8. ತಂಡಗಳ ಹೆಸರುಗಳನ್ನು ನೋಂದಾಯಿಸಿಕೊಳ್ಳಲು ಕೊನೆಯ ದಿನಾಂಕ 05.12.2022 ಸಂಜೆ 5.30ರ ತನಕ ಇದ್ದು ನಿಗದಿತ ಅರ್ಜಿ ನಮೂನೆ ಮತ್ತು ಪ್ರವೇಶ ಶುಲ್ಕದೊಂದಿಗೆ ಕೊಡುವುದು.

ಅರ್ಜಿ ನಮೂನೆಯನ್ನು ಬಂಟರ ಸಂಘದ ವೆಬ್‌ಸೈಟ್ (www.buntsanghablr.com) ಅಥವಾ ಕಛೇರಿಯಲ್ಲಿ ಪಡೆದುಕೊಳ್ಳಬಹುದಾಗಿದೆ.

## ಕ್ರಿಕೆಟ್

| | |
|---|---|
| ಸ್ಥಳ | : ಹೆಚ್.ಎಂ.ಟಿ. ಮೈದಾನ, ಜಾಲಹಳ್ಳಿ. |
| ದಿನಾಂಕ | : 07.01.2023 ಶನಿವಾರ ಮತ್ತು 08.01.2023 ಭಾನುವಾರ |
| ಪ್ರವೇಶ ಶುಲ್ಕ | : ರೂ. 10,000/– ಪ್ರತಿ ತಂಡಕ್ಕೆ. |
| ಹೆಸರು ನೊಂದಾಯಿಸಲು ಕೊನೆಯ ದಿನಾಂಕ | : 25.12.2022ನೇ ಆದಿತ್ಯವಾರ ಸಂಜೆ 5.30ಕ್ಕೆ. |

ಡ್ರಾ ನಿಗದಿಯನ್ನು ಸ್ಪರ್ಧೆಯ ಒಂದು ವಾರದ ಮುಂಚೆ ತಿಳಿಸಲಾಗುವುದು

**ಪಂದ್ಯದ ನಿಯಮ :**

1. ಯಾವುದೇ ವಯೋಮಿತಿಯ ಮಾನದಂಡ ಇಲ್ಲ.
2. ಬೆಂಗಳೂರು ಬಂಟರ ಸಂಘದ ಸದಸ್ಯರು ಮತ್ತು ಅವರ ಮಕ್ಕಳಿಗೆ ಮಾತ್ರ ಆಡಲು ಅವಕಾಶ. ಅಗತ್ಯ ಬಿದ್ದಲ್ಲಿ ತಂಡದ ಆಟಗಾರರ ಸದಸ್ಯತ್ವ ಧೃಡೀಕರಣ ಪುರಾವೆಯನ್ನು ಯಾವುದೇ ಸಂದರ್ಭದಲ್ಲಿ ಒದಗಿಸತಕ್ಕದ್ದು.
3. ತಂಡದಲ್ಲಿ ಸಂಘದ ಸದಸ್ಯೇತರ ಆಟಗಾರರು ಕಂಡು ಬಂದಲ್ಲಿ ಯಾವುದೇ ಹಂತದಲ್ಲಿ ಯಾವುದೇ ಮುನ್ಸೂಚನೆಯಿಲ್ಲದೇ ತಂಡವನ್ನು ಅನರ್ಹಗೊಳಿಸಲಾಗುವುದು ಹಾಗೂ ಅನರ್ಹಗೊಂಡ ತಂಡದ ಪ್ರವೇಶ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.
4. ತಂಡದ ನೋಂದಣಿ ಮಾಡುವಾಗ ಎಲ್ಲಾ 14 ಆಟಗಾರರ ಹೆಸರು, ಸದಸ್ಯತ್ವ ಸಂಖ್ಯೆ ಮತ್ತು ದೂರವಾಣಿ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಿರಬೇಕು.
5. ಪ್ರತಿಯೊಂದು ತಂಡದವರು ತಮ್ಮ ಸ್ವಂತ ಬ್ಯಾಟ್‌ಗಳನ್ನು ಹೊಂದಿರಬೇಕು.
6. ಯಾವುದೇ ರೀತಿಯ ಸಲಹೆ ಸೂಚನೆ ಅಥವಾ ದೂರುಗಳಿದ್ದಲ್ಲಿ ಕ್ರೀಡಾ ಸಮಿತಿಯ ಗಮನಕ್ಕೆ ತರಬೇಕಾಗುವುದು.

ಅರ್ಜಿ ನಮೂನೆಯನ್ನು ಬಂಟರ ಸಂಘದ ವೆಬ್‌ಸೈಟ್ (www.buntsanghablr.com) ಅಥವಾ ಕಛೇರಿಯಲ್ಲಿ ಪಡೆದುಕೊಳ್ಳಬಹುದಾಗಿದೆ.

ಕ್ರೀಡಾ ಸಮಿತಿಯು ಕೈಗೊಳ್ಳುವ ನಿರ್ಧಾರವೇ ಅಂತಿಮ.

## ತ್ರೋಬಾಲ್ : ಮಹಿಳೆಯರಿಗೆ

| | | |
|---|---|---|
| ಸ್ಥಳ | : | ಹೆಚ್.ಎಂ.ಟಿ. ಮೈದಾನ ಜಾಲಹಳ್ಳಿ. |
| ದಿನಾಂಕ | : | 08.01.2023ನೇ ಭಾನುವಾರ, ಬೆಳಿಗ್ಗೆ 10.00ಕ್ಕೆ. |
| ಪ್ರವೇಶ ಶುಲ್ಕ | : | ಪ್ರತಿ ತಂಡಕ್ಕೆ ರೂ.1500/– |
| ಹೆಸರು ನೊಂದಾಯಿಸಲು ಕೊನೆಯ ದಿನಾಂಕ | : | 29.12.2022ನೇ ಆದಿತ್ಯವಾರ ಸಂಜೆ 5.30ಕ್ಕೆ |

ಡ್ರಾ ನಿಗದಿಯನ್ನು ಸ್ಪರ್ಧೆಯ ಒಂದು ವಾರದ ಮುಂಚೆ ತಿಳಿಸಲಾಗುವುದು

**ಪಂದ್ಯದ ನಿಯಮಗಳು :**

1. ಯಾವುದೇ ವಯೋಮಿತಿಯ ಮಾನದಂಡ ಇಲ್ಲ.
2. ಬೆಂಗಳೂರು ಬಂಟರ ಸಂಘದ ಸದಸ್ಯರು ಮತ್ತು ಅವರ ಮಕ್ಕಳಿಗೆ ಮಾತ್ರ ಆಡಲು ಅವಕಾಶ. ಅಗತ್ಯ ಬಿದ್ದಲ್ಲಿ ತಂಡದ ಆಟಗಾರರ ಸದಸ್ಯತ್ವ ಧೃಡೀಕರಣ ಪುರಾವೆಯನ್ನು ಯಾವುದೇ ಸಂದರ್ಭದಲ್ಲಿ ಒದಗಿಸತಕ್ಕದ್ದು.
3. ತಂಡದಲ್ಲಿ ಒಟ್ಟು 7+3 ಆಟಗಾರರು ಮಾತ್ರ ಇರುತ್ತಾರೆ.

ಅರ್ಜಿ ನಮೂನೆಯನ್ನು ಬಂಟರ ಸಂಘದ ವೆಬ್‌ಸೈಟ್ (www.buntsanghablr.com) ಅಥವಾ ಕಛೇರಿಯಲ್ಲಿ ಪಡೆದುಕೊಳ್ಳಬಹುದಾಗಿದೆ.

ಯಾವುದೇ ರೀತಿಯ ಸಲಹೆ ಸೂಚನೆ ಅಥವಾ ದೂರುಗಳಿದ್ದಲ್ಲಿ ಕ್ರೀಡಾ ಸಮಿತಿಯ ಗಮನಕ್ಕೆ ತರಬೇಕಾಗುವುದು. ಕ್ರೀಡಾ ಸಮಿತಿಯು ಕೈಗೊಳ್ಳುವ ನಿರ್ಧಾರವೇ ಅಂತಿಮ.

**ಪಂದ್ಯಾವಳಿಯ ನಿಯಮಾವಳಿಗಳನ್ನು ವೇಳಾಪಟ್ಟಿ ದಿನದಂದು ನೀಡಲಾಗುವುದು.**

**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ನಿತ್ಯರಂಜನ್ ಹೆಗ್ಡೆ**
ಸಂಚಾಲಕರು, ಕ್ರೀಡಾ ಸಮಿತಿ
**ಮೊ : 99456 85277**

**ಕಿರಣ್ ಕುಮಾರ್ ಶೆಟ್ಟಿ ಎಂ.**
ಚೇರ್‌ಪರ್ಸನ್, ಕ್ರೀಡಾ ಸಮಿತಿ
**ಮೊ : 99452 33387**

**ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಕ್ರೀಡಾ ಸಮಿತಿ ಸದಸ್ಯರು**

---

## *Academic Excellence Congratulations*

## PUC/ 12th Std. Achiever



**Grisha Shetty**
D/o Srividya Shetty & Pavithra Shetty
**PUC (Sc.) - 98.83%**
**Physics-100, Chemistry-100,**
**Mathematics-100,**
**Base PU College, Bengaluru**

# ವೈದ್ಯಕೀಯ ಮತ್ತು ವಿಮೆ ವಿಭಾಗ

ದಿನಾಂಕ 29.10.2022 ಶನಿವಾರದಂದು ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಂಗಣದಲ್ಲಿ ನಿರಂತರ ವೈದ್ಯಕೀಯ ಅರಿವು ಕಾರ್ಯಕ್ರಮದ ಅಡಿಯಲ್ಲಿ ವೈದ್ಯಕೀಯ ವಿಭಾಗದ ಚೇರ್‌ಪರ್ಸನ್ ಶ್ರೀ ನಿರಂಜನ್ ಶೆಟ್ಟಿಯವರ ಮುಂಚೂಣಿಯಲ್ಲಿ ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನದ ವಿದ್ಯಾರ್ಥಿನಿಯರಿಗಾಗಿ ಹದಿಹರೆಯದ ಬಾಲಕಿಯರ ಸಮಸ್ಯೆಗಳು ಮತ್ತು ಪರಿಹಾರಗಳು ಎಂಬ ವಿಷಯವಾಗಿ ಖ್ಯಾತ ಸ್ತ್ರೀರೋಗ ತಜ್ಞೆಯಾದ ಡಾ. ವಿದ್ಯಾಶ್ರೀ ಜೆ.ಬಿ.ಯವರು ಉಪನ್ಯಾಸವನ್ನು ನೀಡಿದರು.



ನಿರಂತರ ವೈದ್ಯಕೀಯ ಅರಿವು ಕಾರ್ಯಕ್ರಮದ ಚೊಚ್ಚಲ ಉಪನ್ಯಾಸದಲ್ಲಿ ಸುಮಾರು 1300ಕ್ಕೂ ಅಧಿಕ ವಿದ್ಯಾರ್ಥಿನಿಯರು ತುಂಬು ಉತ್ಸಾಹಗಳಿಂದ ಪಾಲ್ಗೊಂಡರು. ಕುಮಾರಿ ಸಂಹಿತಾ ಶೆಟ್ಟಿಯುವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮವನ್ನು ಆರಂಭಿಸಲಾಯಿತು.

ದೀಪ ಪ್ರಜ್ವಲನೆಯ ಮುಖಾಂತರ ವೈದ್ಯಕೀಯ ವಿಭಾಗ 2022–24ರ ಸಾಲಿನ ಕಾರ್ಯಕ್ರಮಗಳನ್ನು ಮುಖ್ಯ ಅತಿಥಿಯವರಾದ ಡಾ. ವಿದ್ಯಾಶ್ರೀ ಜೆ.ಬಿ. ಯವರು ಉದ್ಘಾಟಿಸಿದರು. ನಮ್ಮ ಹೆಮ್ಮೆಯ ಅಧ್ಯಕ್ಷರಾಗಿರುವ ಶ್ರೀ ಎಂ. ಮುರಲೀಧರ ಹೆಗ್ಡೆ, ಉಪಾಧ್ಯಕ್ಷರುಗಳಾದ ಡಾ. ಜಗದೀಶ್ ಎ. ಶೆಟ್ಟಿ, ಶ್ರೀಮತಿ ಗೀತಾಂಜಲಿ ಡಿ. ಅಜಿಲ, ಗೌರವ ಕಾರ್ಯದರ್ಶಿಯವರಾದ ಶ್ರೀ ಆನಂದರಾಮ ಶೆಟ್ಟಿ ಬಿ., ಜೊತೆ ಕಾರ್ಯದರ್ಶಿ ಶ್ರೀಮತಿ ಶ್ಯಾಮಲ ಶೆಟ್ಟಿ, ಖಜಾಂಚಿ ಶ್ರೀ ಅಮರನಾಥ ಶೆಟ್ಟಿ, ಆರ್.ಎನ್. ಎಸ್ ವಿದ್ಯಾನಿಕೇತನದ ಪ್ರಾಂಶುಪಾಲರು ಮತ್ತು ವೈದ್ಯಕೀಯ ಮತ್ತು ವಿಮೆ ವಿಭಾಗದ ಚೇರ್‌ಪರ್ಸನ್ ಶ್ರೀ ನಿರಂಜನ್ ಶೆಟ್ಟಿ ಕೆ ಇವರು ಉಪಸ್ಥಿತರಿದ್ದರು.



ಸಮಾಜ ಸೇವೆಯ ಆದರ್ಶ ಪರಿಕಲ್ಪನೆಯನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಬಂಟರ ಸಂಘ ಆರ್.ಎನ್.ಎಸ್ – II ವಿದ್ಯಾರ್ಥಿಗಳ ಉಪಯೋಗಕ್ಕಾಗಿ ನೈರ್ಮಲ್ಯ ಪ್ಯಾಡ್ ವಿಲೇವಾರಿ ಯಂತ್ರವನ್ನು ಉಚಿತವಾಗಿ ವೈದ್ಯಕೀಯ ವಿಭಾಗದ ವತಿಯಿಂದ ಒಂದು ಯಂತ್ರವನ್ನು ಹಾಗೂ ಲಯನ್ಸ್ ಕ್ಲಬ್ ಮೆಗಾಸಿಟಿ ಬೆಂಗಳೂರು ಇವರ ವತಿಯಿಂದ ಎರಡು ನೈರ್ಮಲ್ಯ ಪ್ಯಾಡ್ ವಿತರಕ ಯಂತ್ರವನ್ನು ವಿತರಿಸಲಾಯಿತು.

ದಾನಿಗಳಾದ ಲಯನ್ಸ್ ಕ್ಲಬ್‌ನ ಪ್ರತಿನಿಧಿಯಾದ ಲಯನ್ಸ್ ಜಿಲ್ಲಾ 2ನೇ ಉಪ ರಾಜ್ಯಪಾಲರಾದ ಲಯನ್ಸ್ ಮೋಹನ್ ಕುಮಾರ್ ಎನ್, ಮತ್ತು ಉಪನ್ಯಾಸಕರಾದ ಡಾ. ವಿದ್ಯಾಶ್ರೀ ಜೆ.ಬಿ. ಇವರನ್ನು ಗೌರವಿಸಲಾಯಿತು. ಡಾ. ವಿದ್ಯಾಶ್ರೀ ಜೆ.ಬಿ. ಇವರು ಮಕ್ಕಳಿಗೆ ಮನಮುಟ್ಟುವಂತೆ ಸಭಿಕರ ಪಾಲ್ಗೊಳ್ಳುವಿಕೆಯೊಂದಿಗೆ ಉಪನ್ಯಾಸ ಕಾರ್ಯಕ್ರಮವನ್ನು ಚೆನ್ನಾಗಿ ನಡೆಸಿಕೊಟ್ಟರು.



ಸುಮಾರು 1300ಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಭೋಜನದ ವ್ಯವಸ್ಥೆಯನ್ನು ಶ್ರೀ ಜಗನ್ನಾಥ ಶೆಟ್ಟಿ ಹೆಚ್., ಕಾರ್ಯಕಾರಿ ಸಮಿತಿ ಸದಸ್ಯರು, ಡಾ. ವಿವೇಕ್ ಶೆಟ್ಟಿ, ಸಾಯಿರಾಮ್ ಆಸ್ಪತ್ರೆ, ಶ್ರೀ ಕೆ. ನಿರಂಜನ್ ಶೆಟ್ಟಿ, ಚೇರ್‌ಪರ್ಸನ್ ವೈದ್ಯಕೀಯ ಮತ್ತು ವಿಮೆ ವಿಭಾಗ ಇವರ ಪ್ರಾಯೋಜಕತ್ವದಲ್ಲಿ ನಡೆಯಿತು.

ಕಾರ್ಯಕ್ರಮವನ್ನು ಶ್ರೀಮತಿ ಜ್ಯೋತಿಯವರು ಅಚ್ಚುಕಟ್ಟಾಗಿ ನೆರವೇರಿಸಿಕೊಟ್ಟರು. ಶ್ರೀ ಪ್ರಭಾಕರ ಶೆಟ್ಟಿಯವರ ಧನ್ಯವಾದ ಸಮರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

**ಡಾ. ಸವಿತಾ ರೈ ಕೆ.**
ಸಂಚಾಲಕಿ

**ಕೆ. ನಿರಂಜನ್ ಶೆಟ್ಟಿ**
ಚೇರ್‌ಪರ್ಸನ್

**ವೈದ್ಯಕೀಯ ಮತ್ತು ವಿಮಾ ವಿಭಾಗ**



# ವಿಶ್ವಭಾರತಿಗೆ ಕನ್ನಡದಾರತಿ

### ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ ಮತ್ತು ಸಂಯುಕ್ತ ಪದವಿ ಪೂರ್ವ ಕಾಲೇಜು,

ಹೊಮ್ಮಿರಲು ಪ್ರೀತಿ ಎಲ್ಲಿಯದು ಭೀತಿ
ನಾಡೊಲವೆ ನೀತಿ ಹಿಡಿ ನೆನಪ
ಮನೆ ಮನೆಗಳಲ್ಲಿ ಮನ ಮನಗಳಲ್ಲಿ
ಹಚ್ಚೇವು ಕನ್ನಡದ ದೀಪ

ಹಚ್ಚ ಹಸುರಿನ ಸುಂದರ ಬೆಟ್ಟ ಗುಡ್ಡಗಳು, ನದಿಗಳು, ಸಾಧು–ಸಂತರು–ದಾಸರು–ಶಿವಶರಣರು– ಕವಿಗಳು ಜನಿಸಿರುವ ನಾಡೇ ಕನ್ನಡ ನಾಡು. ಇಂತಹ ನಾಡಿನಲ್ಲಿ ಹುಟ್ಟಿರುವುದು ನಮ್ಮೆಲ್ಲರ ಅದೃಷ್ಟ. ನವೆಂಬರ್ 1 ರಂದು ಕನ್ನಡಿಗರು ಅತ್ಯಂತ ಸಡಗರ ಸಂಭ್ರಮದಿಂದ ಎಲ್ಲಾ ಜಾತಿ ಮತ ಧರ್ಮಗಳ ಜನರು ಸೇರಿ ಒಗ್ಗೂಡಿ ಕನ್ನಡ ರಾಜ್ಯೋತ್ಸವವನ್ನು ಆಚರಿಸುತ್ತೇವೆ.




67ನೇ ಕನ್ನಡ ರಾಜ್ಯೋತ್ಸವವನ್ನು ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ ಮತ್ತು ಸಂಯುಕ್ತ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಯಿತು. ನಾಡ ಧ್ವಜಗಳು ಬಾನೆತ್ತರಕ್ಕೆ ರಾರಾಜಿಸಿದವು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಜನಪ್ರಿಯ ಜಾನಪದ ಗಾಯಕ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು, ಚೆಲ್ಲಿದರೂ ಮಲ್ಲಿಗೆಯ ಪುಸ್ತಕದ ರೂವಾರಿಗಳು ಆದಂತಹ ಶ್ರೀಯುತ. ಅಪ್ಪಗೆರೆ ತಿಮ್ಮರಾಜುರವರು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಕನ್ನಡ ಧ್ವಜಾರೋಹಣ ಮತ್ತು ನಾಡ ಗೀತೆಯೊಂದಿಗೆ ಪ್ರಾರಂಭಿಸಲಾಯಿತು.



ಮುಖ್ಯ ಅತಿಥಿಗಳು ತಮ್ಮ ಭಾಷಣದಲ್ಲಿ ಕನ್ನಡ ಭಾಷೆಯ ಭವ್ಯತೆಯನ್ನು ವರ್ಣಿಸುತ್ತಾ ಶಾಲಾ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಆಡಳಿತ ವರ್ಗದವರನ್ನು ಕೊಂಡಾಡಿದರಲ್ಲದೆ ಶಾಲಾವ್ಯವಸ್ಥೆ, ವಿದ್ಯಾರ್ಥಿಗಳ ಶಿಸ್ತು ಹೃದಯ ಸ್ಪರ್ಶಿಯಾಗಿತ್ತೆಂದು ಹೇಳಿದರು. ಅಲ್ಲದೆ ಅವರು ಕವಿಗಳ ವಿಸ್ತೃತ ನಾಮರೂಪ, ಜ್ಞಾನಪೀಠ ಪ್ರಶಸ್ತಿ ಪಡೆದ ಕವಿಗಳ ಬಗ್ಗೆ ಹಾಗೂ ಅವರ ಶಿಕ್ಷಕರ ಬಗ್ಗೆ ತಮ್ಮ ಮನದಾಳದ ಮಾತುಗಳನ್ನು ಹೇಳಿ ಪ್ರಸಿದ್ಧ ಹಾಡುಗಳನ್ನು ಹಾಡಿ ನೆರೆದವರ ಮನರಂಜಿಸಿದರು.



ಶಾಲಾ ಆಡಳಿತ ಮಂಡಳಿ ಶ್ರೀ ಅಪ್ಪಗೆರೆ ತಿಮ್ಮರಾಜು ಅವರನ್ನು ಗೌರವ ಪೂರ್ವಕವಾಗಿ ಸನ್ಮಾನಿಸಿದರು. ಗೌರವ ಕಾರ್ಯದರ್ಶಿಗಳಾದ ಶ್ರೀ ಆನಂದರಾಮ ಶೆಟ್ಟಿ ಬಿ. ಹಾಗೂ ಖಜಾಂಚಿಗಳಾದ ಶ್ರೀ ಅಮರನಾಥ ಶೆಟ್ಟಿಯವರು

ದಿನದ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು. ಅಧ್ಯಕ್ಷರಾದ ಶ್ರೀ ಎಂ. ಮುರಲೀಧರ ಹೆಗ್ಡೆ ತಮ್ಮ ಮಾತಿನಲ್ಲಿ ಕನ್ನಡ ಭಾಷೆಯನ್ನು ಸಮರ್ಥವಾಗಿ ಬಳಸಿದ ಒಂದು ಘಟನೆಯನ್ನು ತಿಳಿಸುತ್ತಾ ಮುಖ್ಯ ಅತಿಥಿಗಳನ್ನು ಕನ್ನಡ ಸಾಹಿತ್ಯದ ಗಾಯನಗಳ ಜ್ಞಾನ ಭಂಡಾರ ಎಂಬುದಾಗಿ ಪ್ರಶಂಸಿಸಿದರು. ನಾಡು ನುಡಿಯ ಏಳ್ಗೆಗೆ ವಿದ್ಯಾರ್ಥಿಗಳು ತಮ್ಮನ್ನು ಹೇಗೆ ತೊಡಗಿಸಿಕೊಳ್ಳಬೇಕು ಎಂಬುದನ್ನು ಸವಿಸ್ತಾರವಾಗಿ ತಿಳಿಸಿದರು.

ವಿದ್ಯಾರ್ಥಿಗಳು ನಡೆಸಿಕೊಟ್ಟ ಸಾಂಸ್ಕೃತಿಕ ಕಾರ್ಯಕ್ರಮಗಳು ನೆರೆದಿದ್ದವರ ಕಣ್ಮನ ಸೆಳೆಯಿತು. ಈ ಕಾರ್ಯಕ್ರಮದ ನಿರೂಪಣೆ ಮತ್ತು ನಿರ್ವಹಣೆಯನ್ನು ಶಾಲಾ ವಿದ್ಯಾರ್ಥಿಗಳು ಬಹಳ ಅಚ್ಚು ಕಟ್ಟಾಗಿ ನೆರವೇರಿಸಿಕೊಟ್ಟರು. ಸ್ವಾಗತ ಭಾಷಣ ಮತ್ತು ವಂದನಾರ್ಪಣೆಯನ್ನು ವಿದ್ಯಾರ್ಥಿಗಳೇ ನಡೆಸಿಕೊಟ್ಟದ್ದು ಕಾರ್ಯಕ್ರಮದ ವಿಶೇಷವಾಗಿತ್ತು.

**"ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಬಾಳ್ಗೆ"**

---

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

## ರಂಗತರಬೇತಿ ಮತ್ತು ಯಕ್ಷಗಾನ ಸಮಿತಿ 2022–24

- ವರ್ಷದ ಕೊನೆಗೊಂದು ಸಾಂಸ್ಕೃತಿಕ ರಸದೌತಣ
- ಯಕ್ಷಗಾನ ಮತ್ತು ನಾಟಕ ರಂಗದ ಕಲಾ ತೋರಣ
- ದಿನಪೂರ್ತಿ ನಿರಂತರ ಕಾರ್ಯಕ್ರಮಗಳ ಹೂರಣ
- ಕಲಾಭಿರುಚಿಗೆ ಸಾಕ್ಷಿಯಾಗಲಿದೆ ಬಂಟರ ಸಂಘದ ಆವರಣ
- ಬರಲು, ಭಾಗವಹಿಸಲು ಮರೆಯದಿರೋಣ

**ದಿನಾಂಕ : 24 ಡಿಸೆಂಬರ್ 2022, ಶನಿವಾರ । ಬೆಳಿಗ್ಗೆ 9.00 ಗಂಟೆಯಿಂದ ರಾತ್ರಿ 10.00 ಗಂಟೆವರೆಗೆ**

**ಸ್ಥಳ : ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನ**

## ಸರ್ವರಿಗೂ ಆದರದ ಸ್ವಾಗತ

**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ಹರಿ ಪ್ರಸಾದ್ ಶೆಟ್ಟಿ**
ಸಂಚಾಲಕರು
**ಮೊ : 95350 23687**

**ರಮೇಶ್ ಜಿ. ಶೆಟ್ಟಿ**
ಚೇರ್‌ಪರ್ಸನ್
**ಮೊ : 96116 48717**

**ರಂಗತರಬೇತಿ ಮತ್ತು ಯಕ್ಷಗಾನ ಸಮಿತಿ**

**ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ರಂಗ ತರಬೇತಿ ಮತ್ತು ಯಕ್ಷಗಾನ ಸಮಿತಿ ಸದಸ್ಯರು**

**ಸಂಪೂರ್ಣ ಮಾಹಿತಿಗೆ ಮುಂದಿನ ಸಂಚಿಕೆಯಲ್ಲಿ ನಿರೀಕ್ಷಿಸಿ....**

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

# ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿ

ಆತ್ಮೀಯ ಸಮಾಜ ಬಾಂಧವರೇ,

**ಸಂಘದ 2022–23 ನೇ ಸಾಲಿನ ಈ ಕೆಳಗಿನ ವಿವಿಧ ದತ್ತಿ ನಿಧಿ ಪ್ರಶಸ್ತಿಗಾಗಿ ಅರ್ಜಿಗಳನ್ನು ಆಹ್ವಾನಿಸುತ್ತಿದ್ದೇವೆ.**

01. ಶ್ರೀ ಸಿ.ಎಲ್. ನಾಯಕ್ ಸ್ಮಾರಕ ಪ್ರಶಸ್ತಿ – **'ಅತ್ಯುತ್ತಮ ಇಂಜಿನೀಯರಿಂಗ್ ವಿದ್ಯಾರ್ಥಿ'**
02. ಡಾ. ಕೆ.ಕೆ. ಹೆಗ್ಡೆ ಸ್ಮಾರಕ ಪ್ರಶಸ್ತಿ – **'ಅತ್ಯುತ್ತಮ ವೈದ್ಯಕೀಯ ವಿದ್ಯಾರ್ಥಿ'**
03. ಶ್ರೀ ಮುಲ್ಕಿ ಸುಂದರರಾಂ ಶೆಟ್ಟಿ ಸ್ಮಾರಕ ಪ್ರಶಸ್ತಿ – **'ಅತ್ಯುತ್ತಮ ವಾಣಿಜ್ಯ ವಿದ್ಯಾರ್ಥಿ'**
04. ಶ್ರೀ ಅಮ್ಮಣ್ಣಿ ರಾಮಣ್ಣ ಶೆಟ್ಟಿ ಸ್ಮಾರಕ ಪ್ರಶಸ್ತಿ – **'ಅತ್ಯುತ್ತಮ ಸರ್ವತೋಮುಖ ಪ್ರತಿಭಾನ್ವಿತ ವಿದ್ಯಾರ್ಥಿನಿ'**
05. ಶ್ರೀ ಚಾರ್ಮುಕ್ಕಿ ನಾರಾಯಣ ಶೆಟ್ಟಿ ಪ್ರಶಸ್ತಿ – **'ಅತ್ಯುತ್ತಮ ಕಾನೂನು ವಿದ್ಯಾರ್ಥಿ'**
06. ಶ್ರೀಮತಿ ಅಕ್ಕಯ್ಯ ಎನ್. ಶೆಟ್ಟಿ ಪ್ರಶಸ್ತಿ – **'ಅತ್ಯುತ್ತಮ ದಂತ ವೈದ್ಯಕೀಯ ವಿದ್ಯಾರ್ಥಿ'**
07. ಶ್ರೀ ಕೆ.ಪಿ. ರಾಮಣ್ಣ ಶೆಟ್ಟಿ ಪ್ರಶಸ್ತಿ – **ಅತ್ಯುತ್ತಮ** ಬಿ.ಎಸ್ಸಿ. (ಕೃಷಿ)/ ಪಿ.ಯು.ಸಿ. (ವಿಜ್ಞಾನ) ವಿದ್ಯಾರ್ಥಿ
08. ಶ್ರೀ ಎಚ್. ಟಿ. ಭಂಡಾರಿ ಪ್ರಶಸ್ತಿ – **'ಅತ್ಯುತ್ತಮ ಕ್ರೀಡಾ ವಿದ್ಯಾರ್ಥಿ'**
09. ಶ್ರೀ ಪಿ.ಎಸ್. ತಿಮ್ಮಪ್ಪ ಶೆಟ್ಟಿ ಸ್ಮಾರಕ ಪ್ರಶಸ್ತಿ – **ಯಾವುದೇ ಕ್ಷೇತ್ರದಲ್ಲಿನ ಉನ್ನತ ಸಾಧನೆಗಾಗಿ**
10. ಶೀತಲ್ ಕೃಷ್ಣಪ್ಪ ಸ್ಮಾರಕ ಪ್ರಶಸ್ತಿ – **'ವಿವಿಧ ಕ್ಷೇತ್ರದಲ್ಲಿನ ಸರ್ವತೋಮುಖ ಪ್ರತಿಭೆ'** ಗಾಗಿ (ವಿದ್ಯಾರ್ಥಿನಿ)
11. ಮಾಸ್ಟರ್ ಜಯಶೀಲ್ ಜಿ. ಶೆಟ್ಟಿ ಸ್ಮಾರಕ ಪ್ರಶಸ್ತಿ – **'ಅತ್ಯುತ್ತಮ ಬಿ.ಇ.'** (ಎಲೆಕ್ಟ್ರಾನಿಕ್ಸ್) **ಅಥವಾ ಇತರೆ ವಿಷಯದಲ್ಲಿ 'ಇಂಜಿನಿಯರಿಂಗ್ ಪದವಿ'**
12. ರಕ್ಷಾ ರೈ ಸ್ಮಾರಕ ಪ್ರಶಸ್ತಿ – **'ಶಾಸ್ತ್ರೀಯ ಸಂಗೀತ'ದಲ್ಲಿ ವಿಶೇಷ ಸಾಧನೆಗಾಗಿ**
13. ಮುಲ್ಕಾಡ್ ಲಕ್ಷ್ಮೀ ಶೀನಪ್ಪ ಶೆಟ್ಟಿ ಪ್ರಶಸ್ತಿ – **'ಅತ್ಯುತ್ತಮ ಪಶು ವಿಜ್ಞಾನ ವಿದ್ಯಾರ್ಥಿ'** ಅಥವಾ **'ಪಶುವಿಜ್ಞಾನ ಕ್ಷೇತ್ರದಲ್ಲಿನ ವಿಶೇಷ** ಸಾಧನೆಗಾಗಿ
14. ಶ್ರೀಮತಿ ಕೆಂಜೂರು ನಾಯ್ಕರ ಮನೆ ದೊಡ್ಡಕ್ಕ ಅನಂತ ಶೆಟ್ಟಿ ಸ್ಮಾರಕ ಪ್ರಶಸ್ತಿ – **'ಅತ್ಯುತ್ತಮ ವೈದ್ಯಕೀಯ ವಿದ್ಯಾರ್ಥಿನಿ'**
15. ಶ್ರೀ ಮಾರಾಳಿಮನೆ ಅನಂತ ಶೆಟ್ಟಿ ಸ್ಮಾರಕ ಪ್ರಶಸ್ತಿ– **'ಅತ್ಯುತ್ತಮ ನೇತ್ರ ವೈದ್ಯ'** ಅಥವಾ **'ಯಾವುದೇ ವೈದ್ಯಕೀಯ ವಿಭಾಗದಲ್ಲಿ ಸ್ನಾತಕೋತ್ತರ ಪದವಿ'**
16. ರಕ್ಷಾ ಎಂ. ಶೆಟ್ಟಿ ಸ್ಮಾರಕ ಪ್ರಶಸ್ತಿ – **'ಶಾಸ್ತ್ರೀಯ ನೃತ್ಯ'** ದಲ್ಲಿನ **ವಿಶೇಷ ಸಾಧನೆಗಾಗಿ**
17. ಶ್ರೀ ಮೋಹನ್‌ದಾಸ್ ಎನ್. ಹೆಗ್ಡೆ ಸ್ಮಾರಕ ಪ್ರಶಸ್ತಿ – **'ಅತ್ಯುತ್ತಮ ಕಾನೂನು ವಿದ್ಯಾರ್ಥಿ'**
18. ಶ್ರೀ ನಿಡ್ಡೋಡಿ ಪ್ರೇಮದಾಸ್ ಶೆಟ್ಟಿ ಸ್ಮಾರಕ ಪ್ರಶಸ್ತಿ – **' ಗ್ರಾಮೀಣ ಪ್ರತಿಭಾನ್ವಿತ ವಿದ್ಯಾರ್ಥಿ'**
19. ಕೊಳ್ಕೆಬೈಲ್ ನಡುಮನೆ ಶ್ರೀಮತಿ ವನಜಾಕ್ಷಿ ಕರುಣಾಕರ ಶೆಟ್ಟಿ ಸ್ಮಾರಕ ಪ್ರಶಸ್ತಿ – **'ಗ್ರಾಮೀಣ ಪ್ರತಿಭಾನ್ವಿತ ವಿದ್ಯಾರ್ಥಿನಿ'**
20. ವಂಡಾರು ತೆಂಕಬೆಟ್ಟು ಬಾಲಕೃಷ್ಣ ಶೆಟ್ಟಿ ಸ್ಮಾರಕ ಪ್ರಶಸ್ತಿ – **ವಾಣಿಜ್ಯ ವಿಷಯದಲ್ಲಿ ಪದವಿ ಗಳಿಸಿ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡುತ್ತಿರುವ ಅತ್ಯುತ್ತಮ** ವಿದ್ಯಾರ್ಥಿನಿ

21. ದಿ। ಡಾ। ಕೆ. ನಾಗಪ್ಪ ಆಳ್ವ ಮತ್ತು ದಿವಂಗತ ಶ್ರೀಮತಿ ಕಲ್ಯಾಣಿ ಆಳ್ವರವರ ಸ್ಮಾರಕ ಪ್ರಶಸ್ತಿ **ವಿಜ್ಞಾನ, ವಾಣಿಜ್ಯ, ಕಲಾ ವಿಭಾಗಗಳಲ್ಲಿನ ವಿಶೇಷ ಸಾಧನೆಗಾಗಿ**
22. ದಿ। ಡಾ। ಕೆ. ನಾಗಪ್ಪ ಆಳ್ವ ಮತ್ತು ದಿವಂಗತ ಶ್ರೀಮತಿ ಕಲ್ಯಾಣಿ ಆಳ್ವರವರ ಸ್ಮಾರಕ ಪ್ರಶಸ್ತಿ **ಕಲೆ, ಸಂಗೀತ, ನೃತ್ಯ, ಯಕ್ಷಗಾನ, ನಾಟಕ ಇತ್ಯಾದಿ ವಿಭಾಗಗಳಲ್ಲಿ ವಿಶೇಷ ಸಾಧನೆಗಾಗಿ**
23. ದಿ। ಡಾ। ನಾಗಪ್ಪ ಆಳ್ವ ಮತ್ತು ದಿವಂಗತ ಶ್ರೀಮತಿ ಕಲ್ಯಾಣಿ ಆಳ್ವರವರ ಸ್ಮಾರಕ ಪ್ರಶಸ್ತಿ **ಕ್ರೀಡೆ, ಯೋಗ ಕ್ಷೇತ್ರದಲ್ಲಿನ ವಿಶೇಷ ಸಾಧನೆಗಾಗಿ**
24. ಶ್ರೀ ಕಿಶನ್ ಜಲಂಧರ ಶೆಟ್ಟಿ ಪ್ರಶಸ್ತಿ **ಅತ್ಯುತ್ತಮ ಮ್ಯಾನೇಜ್‌ಮೆಂಟ್ ವಿದ್ಯಾರ್ಥಿ ಅಥವಾ ಯಾವುದೇ ಕ್ಷೇತ್ರದಲ್ಲಿನ ಉನ್ನತ ಸಾಧನೆಗಾಗಿ**
25. ಮಹಿಳಾ ವಿಭಾಗ ರಜತ ಸಂಭ್ರಮ ಸ್ಮಾರಕ ಪ್ರಶಸ್ತಿ – **ಎಸ್.ಎಸ್.ಎಲ್.ಸಿ / 10ನೇ ತರಗತಿಯಲ್ಲಿ ಅತೀ ಹೆಚ್ಚು ಅಂಕಗಳಿಸಿರುವ ಅತ್ಯುತ್ತಮ ವಿದ್ಯಾರ್ಥಿನಿ**
26. ಮಹಿಳಾ ವಿಭಾಗ ರಜತ ಸಂಭ್ರಮ ಸ್ಮಾರಕ ಪ್ರಶಸ್ತಿ– **ದ್ವಿತೀಯ ಪಿಯುಸಿ/ 12ನೇ ತರಗತಿಯಲ್ಲಿ ಅತೀ ಹೆಚ್ಚು ಅಂಕಗಳಿಸಿರುವ ಅತ್ಯುತ್ತಮ ವಿದ್ಯಾರ್ಥಿನಿ**
27. ದಿ. ಸೂಡ ಸಂಜೀವ ಶೆಟ್ಟಿ ಹಾಗೂ ದಿ. ಸರೋಜಿನಿ ಸಂಜೀವ ಶೆಟ್ಟಿ ಸ್ಮಾರಕ ನಗದು ಪ್ರಶಸ್ತಿ – **ಪಿಯುಸಿ, ಪದವಿ ಅಥವಾ ಇನ್ನಾವುದೇ ವೃತ್ತಿಪರ ಶಿಕ್ಷಣ ಪಡೆಯುತ್ತಿರುವ ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿ (3 ಪ್ರಶಸ್ತಿಗಳು)**
28. ದಿ। ಶಕ್ತೀಶ್ ಶೆಟ್ಟಿ ಸ್ಮಾರಕ ಪ್ರತಿಭಾ ಪುರಸ್ಕಾರ – **ಪಿ.ಯು.ಸಿ.ಯಲ್ಲಿ ಅತೀ ಹೆಚ್ಚು ಅಂಕ ಗಳಿಸುವ ಪ್ರತಿಭಾನ್ವಿತ ವಿದ್ಯಾರ್ಥಿನಿ. (4 ಪ್ರಶಸ್ತಿಗಳು)**
29. ದಿ। ಕೆ. ಎಸ್ ಹರ್ಷವರ್ಧನ್ ಶೆಟ್ಟಿ ಸ್ಮಾರಕ ಪ್ರಶಸ್ತಿ– **ಪಿ.ಯು.ಸಿ, ಪದವಿ ಅಥವಾ ಇನ್ನಾವುದೇ ಶಿಕ್ಷಣ ಪಡೆಯುತ್ತಿರುವ ತಂದೆಯನ್ನು ಕಳೆದುಕೊಂಡಿರುವ ವಿದ್ಯಾರ್ಥಿ – (2 ಪ್ರಶಸ್ತಿಗಳು)**
30. ಬ್ರಹ್ಮಾವರ ತೆಂಕುಮನೆ ದಿ. ಡಾ. ಬಿ. ರಾಘವ ಶೆಟ್ಟಿ ಸ್ಮಾರಕ ಪ್ರಶಸ್ತಿ – **ವೈದ್ಯಕೀಯ ಶಿಕ್ಷಣ ಪಡೆಯುತ್ತಿರುವ ಬಂಟ ಸಮುದಾಯದ ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ವಿದ್ಯಾರ್ಥಿ**

ಪ್ರಸಕ್ತ ಸಾಲಿನಲ್ಲಿ ಶಿಕ್ಷಣವನ್ನು ಪೂರೈಸಿದ ಈ ಮೇಲಿನ ಯಾವುದೇ ಪ್ರಶಸ್ತಿಗೆ ಆಸಕ್ತ ಅರ್ಹ ಅಭ್ಯರ್ಥಿಗಳು ತಮ್ಮ ಸ್ವವಿವರ, ಅಂಕಪಟ್ಟಿಯ ಪ್ರತಿ, ಇತ್ತೀಚಿನ ಭಾವಚಿತ್ರ ಹಾಗೂ ದೂರವಾಣಿ ಸಂಖ್ಯೆಯೊಂದಿಗೆ ದಿನಾಂಕ 31.12.2022 ರ ಒಳಗಾಗಿ ಸಂಘದ ಕಛೇರಿಗೆ ಅರ್ಜಿ ಸಲ್ಲಿಸಲು ಕೋರಲಾಗಿದೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ದಿನಾಂಕ 26.01.2023 ರಂದು ನಡೆಯಲಿರುವ ಸಂಘದ ಸ್ಥಾಪಕರ ದಿನಾಚರಣೆಯ ಸಮಾರಂಭದಲ್ಲಿ ನಗದು ಹಾಗೂ ಪ್ರಶಸ್ತಿ ಫಲಕ ನೀಡಿ ಗೌರವಿಸಲಾಗುವುದು.

**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ಅಜಿತ್ ಶೆಟ್ಟಿ**
ಸಂಚಾಲಕರು, ಚೇರ್‌ಪರ್ಸನ್,
ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿ

**ಸದಾನಂದ ಸುಲಾಯ**
ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿ

**ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿ ಸದಸ್ಯರು**

# CHILDHOOD OF OLD AGE



**Samanvitha Shetty**

Hope is nurtured in the womb and loved as we see it grow. We cherish the development as there is significant change every week, month and finally when the baby is born, the change starts showering joy in life. A cry, smile, touch, sound, everything is keenly observed and captured in the memory so deeply that it always lights up our face. Childhood is a phase of life where we learn to value adulthood and respect old age. I have read and heard people saying you become a child when you grow old. Then why is old age not as pleasant as childhood?



We grow from hope to love and then to trust and respect. This is our journey. But when we reach old age, we are left with no hope; love is replaced by responsibility; trust and respect swap their places with care and concern. Each emotion has its role to play in that age, but they should come as an addition and not as replacements. Look at life like a game of Jenga. At first, there is a tall tower, strong and ready to face everything. As life moves on, different phases strike the tower. There is displacement of blocks, one by one and one day, one displacement shatters the whole arrangement. When our life changes with an entry of a new life, our baby, everything looks beautiful. We put every effort to feed, give bath, potty train, walk, sleep and the list is endless. Try the same list with your aged elders whom you may have to take care. The thought is disturbing. It's not because we don't love them, but it is because we think only small kids need to be taken care of, taught every basic thing in life. The thought of elders knowing everything makes us doubt their needs. The life you lead for a certain length becomes your identity. Unpleasant and unexpected changes which comes with age is difficult to embrace when you feel the future becomes a burden to someone you love and not a bundle of joy. Once a kid is taught all the basic activities of living, they become independent. With age comes dependency but we look at it like a task or duty and not as love because here there is no hope of becoming independent again. We fail to map the journey which started with hope in the womb to the ending which should lead to satisfaction and contentment.

We give everything a kid wants and most of the time it is more than what he needs. But will our mind support the same when we do that for our old-aged elders? Not always. We start reasoning and justifying our actions. Hope brings joy but love brings peace. Respect and obedience are not the only elements which a relationship asks as it reaches its dusk. It still wants to see the love and hope in every eye as those old eyes once had.

We are never tired of training our kids, teaching them to do the right thing, correcting their mistakes but as the role reverses, we are clueless. We are only learning how to be parents, but we are never taught how to be care takers with love, hope, respect and trust. Our mind is ready to accept that kids can be naughty and mischievous, but we fail to understand that as we grow old

our brain can also work mischievously which is beyond our control. We can't train our elders, we can't teach them what is right, we can't correct their mistakes, then how did old age become a child's life?

Talk to a mother who is taking care of a newborn all day long and talk to a daughter taking care of her aged mother all day long. There might be lot of similarities in the task they do, but there is lot of difference in their emotions. A mother is free to mould her child but a daughter has to force herself to be moulded into her mother's life. The difference is in our thinking. If you can unconditionally love your kid, try to unconditionally love your elders also. Kids may or may not know the value of what they are getting unless you make them understand but your elders will definitely know the value of what they are getting.

Childhood is a carefree phase of life where everything is taken care of by someone else and so should old age be. The care what we get as a child makes us what we are and gives us an identity as an adult. When a kid stumbles while he learns to walk, he never stops. My daughter always wanted to walk without holding my hand. There is a sense of accomplishment in that young mind and as her mother, when I see danger, I run to protect her. Later in life, we reach an age where we again start to stumble while we walk, we look for a hand to hold or else we are forced to stop. At that age finding a hand to hold gives a sense of accomplishment that I have earned the love which I gave in my life. There is security in that danger. Understanding the difference and reciprocating to the need at two extreme stages of life is what makes us human. In our current generation, we have lot of parenting videos, blogs, books etc., but our journey is not only to learn to become a good parent. Our responsibility also lies in becoming a good child.

The fear of growing old is equally as painful as is the fear of losing hope. Our ability to lend a helping hand to our kids is taught by our elders. Show them what they taught us and be there for their needs with love and give them the hope which is lost in twilight.

There comes a time when the sky looks similar be it dawn or dusk. The Difference pitches within fraction of seconds. That fraction is where we have to bring in the childhood to old age. Our elders ask for just a fraction of our time from our whole life, which we owe to them. Make that fraction count as they are bless us with a smile.

# *Congratulations*




**Best debutant actress in a leading role in movie 1980 Sharanya Shetty,** D/o Sri Shivananda Shetty and Smt. Shyamala Shetty is a trained classical dancer and a model. She has won "Miss South India 2018 Beautiful Smile" held at Kerala. She has acted in a serial, Gattimela as Sahitya and got good recognition. She has won an award for her first movie 1980; starred along with Priyanka Upendra. Her next release is Huttu Habbada Shubhashayagalu with actor Diganth and there are more in line, Spooky College and Naguvina Hoogala Male. Bunts Sangha Bangalore congratulates and wishes her all the best.

# *ಮೌನ, ಧ್ಯಾನ, ವ್ಯವಧಾನ*



**ಡಾ.ಎನ್. ಜಯರಾಮ ಶೆಟ್ಟಿ**

ಆತನೊಬ್ಬ ಅಸಾಮಾನ್ಯ ವಾಚಾಳಿ. ದಿನವೆಲ್ಲ ಇತರರನ್ನು ದೂರುವ, ದೂಷಿಸುವ ಗೀಳು ಅಂಟಿಸಿಕೊಂಡಿದ್ದ. ಕಾಲುಕೆರೆದು ಜಗಳಕ್ಕೆ ನಿಲ್ಲುವ, ಕಂಡವರ ವಿರುದ್ಧ ಮೂಗರ್ಜಿ ಬರೆಯುವ, ಒಟ್ಟಿನಲ್ಲಿ ಆ ಊರಿಗೆ 'ಸಮಸ್ಯಾತ್ಮಕ' ವ್ಯಕ್ತಿಯಾಗಿ ಕಾಣಿಸಿಕೊಂಡಿದ್ದ, ಆತ ಬುದ್ಧಿಮತ್ತೆಯಲ್ಲಿ ಕಡಿಮೆಯೇನೂ ಇರಲಿಲ್ಲ. ಪರಪೀಡಕ ಪಟ್ಟಿಯನ್ನು ಅಂಟಿಸಿಕೊಂಡು, ಕಾಲಿಗೆ ಚಕ್ರ ಕಟ್ಟಿಕೊಂಡವನಂತೆ ಊರೆಲ್ಲ ಸುತ್ತುತ್ತಿದ್ದ.

ಊರಿನವರ ಸಡಗರದ ದಿನವಿಂದು. ಕೆಲವು ದಿನಗಳ ಹಿಂದೆ ಆಯಾಚಿತವಾಗಿ ಭೇಟಿಕೊಟ್ಟು ತಂಗಿದ್ದ ಗುರುಗಳೊಬ್ಬರು, ಮೌನದಿಂದಿದ್ದು ಅಂದು ಮೌನ ಮುರಿದು, ಊರಿನವರಿಗೆ ಪ್ರವಚನ ಕೊಡುವ ದಿನವಿದು. ಗುರುಗಳ ಮೌನ ಕಂಡಿದ್ದ ಊರ ಮಂದಿಗೆ ಮಾತು ಕೇಳುವ ಕಾತರ ಮತ್ತು ಸಂಭ್ರಮ. ಆ ದಿನ ಊರಿಗೆ ಊರೇ ಸೇರಿತ್ತು. ನಮ್ಮ ವಾಚಾಳಿಮಿತ್ರ ಎಂದಿನಂತೆ ಮುಂದಿನಸಾಲಿನ ಮೊದಲ ಆಸನದಲ್ಲಿಯೆ ಕುಕ್ಕರಿಸಿದ್ದ. ಗುರುಗಳ ಮಾತು ಕೇಳುವ ತವಕದ ಮಧ್ಯೆ, ಈ ಅಧಿಕಪ್ರಸಂಗಿಯ ಆಟಾಟೋಪ ನೋಡಿ ಪುಕ್ಕಟೆ ಮನೋರಂಜನೆ ಪಡೆಯುವ ಆಸೆ ಅವರದ್ದು. ಗುರುಗಳು ಮೌನದಿಂದ ಮಾತಿಗಿಳಿದು, ಅಷ್ಟೇ ಬೇಗ ಮುಗಿಸಿ, ಹೇಳುತ್ತಾರೆ, 'ಬಂಧುಗಳೇ, ಮಾತು ಏಕಮುಖಿ, ಸಂವಾದ ಬಹುರೂಪಿ'. ನೀವೇ ಏನಾದರು ಕೇಳಿ, ಸಾಧ್ಯವಾದರೆ ಉತ್ತರ ಕೊಟ್ಟೇನು'. ಗುರುಗಳ ಬಲು ಅಪರೂಪದ ಸೌಜನ್ಯ, ಸರಳತೆ, ಕಂಡು, ಭರಪೂರ ಕಿವಿಗಡಚಿಕ್ಕುವ ಚಪ್ಪಾಳೆ ಸ್ತಬ್ದವಾಗುತ್ತಲೇ, ಇಡೀ ಸಭೆ ಈಗ ದುರದುರನೆ, ನಮ್ಮ ಬಾಯಿಬಡುಕ ಮಿತ್ರನನ್ನೇ ನೋಡುತ್ತಿದೆ. 'ಎಲಾ ಇವನ, ಇವತ್ತು ಇವನ ಬಾಯಿಗೇನು ಬಡಿದಿದೆ? ಇಷ್ಟು ದಿನ ಬಾಯಿ ಬೇಧಿ ಮೂಲಕ ಹೊಲಸೆಬ್ಬುತ್ತಿದ್ದವ ಇಂದು ಬಾಯಿಗೆ ಬೀಗ ಜಡಿದುಕೊಂಡಿದ್ದೇಕೆ?

ನಿಧಾನವಾಗಿ ಎದ್ದುನಿಂತು ಹೇಳುತ್ತಾನೆ, 'ಗುರುಗಳೆ, ನಾನೀಗ ಸಂಪೂರ್ಣ ಶರಣಾದೆ. ನಿಮ್ಮ ಮೌನ ಮತ್ತು ಮಾತು ಅರಿತ ಮೇಲೆ, ಮಾತು ನನ್ನ ಬಾಯಿಂದ ಬರದು. ಆದರೂ ಒಂದು ಪ್ರಶ್ನೆ... ಮೌನ ಮತ್ತು ಧ್ಯಾನದೊಳಗಿನ ವ್ಯತ್ಯಾಸವೇನು? ಈ ಎರಡಕ್ಕೂ ಸರಳ ಮಾರ್ಗ ಯಾವುದು? ಗುರುಗಳು ಅತಿ ಪ್ರಸನ್ನರಾಗಿ ಹೇಳುತ್ತಾರೆ, 'ಮಗು, ಇಂತಹ ಪ್ರಶ್ನೆ ಕೇಳಿದ ನೀನು ಸಾಮಾನ್ಯನಲ್ಲ. ಬೇಕಾಗಿಲ್ಲ, ಆದರೂ ಕೇಳಿಸಿಕೊಳ್ಳು. ಮೌನ ಎರಡು ತರಹದ್ದು, ಆಂತರಿಕ ಮೌನ ಮತ್ತು ಬಾಹ್ಯ ಮೌನ. ಧ್ಯಾನಕ್ಕೆ ಆಂತರಿಕ ಮೌನ ಅತ್ಯಗತ್ಯ. ಮನಸ್ಸಿನ ಒಳಮಾತನ್ನು ನಿಲ್ಲಿಸುವುದೇ ಧ್ಯಾನ. ಮನಸ್ಸಿನ ಒಳಮಾತು ಪ್ರಸಕ್ತ ಅಥವಾ ಪೂರ್ವಕ್ಕೆ ಸಂಬಂಧ ಪಟ್ಟಿದುದು. ಪ್ರತಿದಿನದ ಧ್ಯಾನ ಕಾಡುವ ವಿಷಯುಗಳನ್ನು ನಿವಾಳಿಸುತ್ತದೆ. ಸದ್ದನ್ನೇ ಇಲ್ಲವಾಗಿಸುತ್ತದೆ. ಊರಿನವರನ್ನು ಉದ್ದೇಶಿಸಿ ಗುರುಗಳು ಕೊನೆಯಲ್ಲಿ ಹೇಳುತ್ತಾರೆ, 'ಇಷ್ಟು ದಿನ ನಿಮ್ಮ ಕಟು ನಿಂದನೆಗೊಳಗಾದ ಈ ವ್ಯಕ್ತಿ ನಿಮ್ಮ ಗುರುವಾಗುವಷ್ಟು ಬೆಳೆದಿದ್ದಾನೆ. ನನ್ನ ನಿರಂತರ ಸಂಪರ್ಕದಲ್ಲಿದ್ದು ಇಲ್ಲಿಗೆ ಕರೆಸಿಕೊಂಡಿದ್ದು ಅವನೇ. ಬೇಕಾದಾಗ ನಾನೂ ಬರುವೆ, ನಿಮ್ಮೊಳಗೆ ಇರುವೆ.

# *ಉಳಿಸೋಣ ಕನ್ನಡ*

ನೋಡು ನೋಡು ಬೆಂಗಳೂರು ನೋಡಲಾ
ಇಲ್ಲಿ ಇಂಗ್ಲೀಷು ಕಾರುಬಾರು ಜೋರಾಗಿ ಬೊಂಬಡಾ
ಆಡಬೇಕು ಮುತ್ತಿನಂಥ ಕನ್ನಡ
ಆಳಬೇಕು ನಮ್ಮನ್ನೆಲ್ಲ ಕನ್ನಡ

ಕೆಂಪೇಗೌಡ ಕಟ್ಟಿದ ನಾಡಲಾ
ಇದು ಭವ್ಯವಾದ ಸಂಸ್ಕೃತಿಯ ಬೀಡಲಾ
ಕನ್ನಡದ ಹೆಮ್ಮೆಯ ಈ ನೆಲ
ಆಯ್ತೆ ಪರಭಾಷೆ ಆಡೊಂಬಲಾ

ತುಂಬಿದೆ ಪರಭಾಷೆ ಗದ್ದಲ
ಕಾನ್ವೆಂಟು ಕ್ಲಬ್ಬುಗಳ ಅಬ್ಬರ
ಉಸಿರಾಗಬೇಕು ಇಲ್ಲಿ ಕನ್ನಡ
ಹಸಿರಾಗಬೇಕು ಒಮ್ಮೆ ಈ ನೆಲ

ಭಾಷೆ ಉಳಿಯಲೆಂದು ನಮ್ಮ ಹಂಬಲ
ನೀಡಿರಣ್ಣ ನೀವು ನಮಗೆ ಬೆಂಬಲ
ಉಳಿಸೋಣ ಬೆಳೆಸೋಣ ಕನ್ನಡ
ಮುತ್ತಿನಂಥ ನಮ್ಮ ಭಾಷೆ ಕನ್ನಡ

**ಬಾಲಕೃಷ್ಣ ಹೆಗ್ಡೆ ಬನ್ನಾಡಿ**

# *DURGA PUJO IN KOLKOTTA*




**Dr. Meera Krishnappa**

Dassehra is a widely celebrated festival across the length and breadth of India. In different parts of the country, it is celebrated in different ways for different reasons. While in Gujarat, it is celebrated as Navratri to commemorate the nine days where people gather in open spaces to celebrate feminine divinity, referred to as Shakti,in Karnataka it is celebrated as the victory of Ma Kali over Mahishashura, the demon.

Kolkotta is famous for its Durga Pujo and this festivity has now been includedas a heritage festival by UNICEF which needs to be preserved and documented for its unique intangible contribution to the cultural heritage of humanity.

This year, I was privileged to witness the Durga Pujo in person in Kolkotta and went pandal hopping with enthusiasm coupled with curiosity and religious fervour.



Durga Pujo in Kolkotta cuts across barriers of caste, community and religion and all divides collapse as throngs of spectators crowd the streets as they walk around the public installations of Goddess Durga.

It is said that the preparations commence months preceding the festival,as small artisanal workshops sculpt images of Durga and her family using unfired clay pulled from the Ganga River.

The worship of the goddess then begins on the inaugural day of Mahalaya, when eyes are painted onto the clay images to bring the goddess to life. It ends on the tenth day, when the images are immersed in the river from where the clay came. Thus, the festival has also come to signify 'home-coming' or a seasonal return to one's roots. Durga Puja is seen as the best instance of the public performance of religion and art, and as a thriving ground for collaborative artists and designers. The festival is characterized by large-scale installations and pavilions in urban areas, as well as by traditional Bengali drumming and veneration of the goddess.

It is said that this festival was started to encourage young brides to return to their maternal homes and be with their families for the nine days of the festival. Earlier once the girl was married, she had to leave her family and go to the husband's house from where she would rarely return. This festival therefore provides a reason for the women to return to their maternal homes because, the festival symbolizes the homecoming of Goddess Durga for five days to her matrimonial home from Mount Kailash.  In all the pandals, what is commonly seen is that Ma Durga is worshipped along with Goddess Laxmi and Saraswati, Lord Ganesh and Lord Kartikeya. I was told that Laxmi signifies prosperity while Saraswati signifies Learning. Lord Ganesha signifies the fact that even though he looks unusual he has his own place in the family while Lord Kartikeya signifies

strength and bravery. The underlying message is to treat all family members equally without bias and prejudice while welcoming them with warmth, love and devotion.

The community Durga Puja, or the sarbojanin puja, has its origins in the barowari puja, which started in Guptipara village in Hooghly district in 1759.It was this inclusiveness and the public nature of marking the festival that set apart the *sarbojanin puja* from the worship and celebrations that were held in aristocratic households with access restricted to family members.

One of the stories surrounding the origins of this format of the puja says that in 1759 in Guptipara, a group of women who went to a *zamindar bari* to pray were made to leave, perhaps because the family was unwilling to permit non-members to pray inside their home. Angry at the perceived insult, 12 men of the village decided to hold a *puja* where the community could pray, creating the first community Durga Puja, from where the format also gets its name- "*baro*" for twelve, and "*yari*" for friends.

Archives of the the Bhowanipur Santan Dharmatsahni Sabha say that in 1910, large religious organisations in the city decided that they would start a *sarbojanin* Durga *puja* where everyone could pray and a community meeting was held where it was decided that the *puja* would be conducted following vedic principles.

Durga *puja* is one that includes complex rituals and requires several priests. The decision was made to conduct this *puja* by the Adi Ganga, strictly following vedic principles, adjacent to the Jora Sahib mandir, with the deity facing the Shiv temple. Over the centuries, the Adi Ganga, also called Tolly's Canal, one of the most significant streams of the Ganges River in its lower course, was once an important water source for Calcutta. But post - Independence, the Adi Ganga slowly turned into a sewer due to civic mismanagement and other socio-political factors.

At the time that this *barowari puja* was first held in Calcutta, the city was preparing to host another large gathering scheduled for a year later. It coincided with the 26th session of the Indian National Congress held in 1911, and it is said that this form of the *puja* was used as a nationalist forum in religious guise.

In many ways, from its inception, the business of Durga *puja* has sustained several communities across Bengal. But what the community Durga *pujas* did was that it increased demand for the work of the kumor or the artisan who made idols of the deities. Now, with community Durga *pujas* happening in almost every para or neighbourhood in Calcutta, they also provided competitive possibilities between neighbourhoods over the creation of more exquisite and intrinsic clay art within the tableau of the Durga idol.

By the early twentieth century, the *barowari puja* had transformed into a more communal space because of its inclusiveness where it gave access to people regardless of social factors like age, gender, caste, class and religion. This new form of inclusive celebrations came to be called the *sarbojanin puja*.

While the history of the donations associated with community Durga *pujas* had modest origins, over the decades, that has changed and increased to very large sums of money. Although the history of these donations started off as voluntary, it quickly ceased to be so even in the early years of these community *pujas*. The Great Depression of the late 1930s and early 1940s further necessitated public funding.

Pomp and splendour, competition to outdo other neighbourhoods and draw in the largest crowds have become synonymous with the *barowari puja* and the *sarbojanin puja* of the city and

elsewhere in West Bengal where the festival is marked. But in the small neighbourhood by the Adi Ganga, off Balaram Bose Ghat, where the *barowari puja* started with humble beginnings in Calcutta, things surrounding the worship of the goddess have largely remained as they were 112 years ago.

What really attracted me was the creativity involved in the displays of the various pandals. One had a Buddhist pagoda theme, while another had a freedom movement theme. Another was based on a South Indian Temple theme and so on and so forth. The common element being that Goddess Durga is always with Laxmi, Saraswati, Ganesha and Kartikeya. The opulence of the idols is mesmerising and breath – taking. I visited almost 10 -12 pandals and each seemed more magnificent than the previous one.


I even witnessed the Sindhur Khela.This is a function where women smear each other with sindur on Vijayadashami, the last day of the Durga Puja. On the day of the Vijayadashami after the conclusion of the ritual worship, married Bengali Hindu women apply sindur on the forehead and feet of the goddess and offer sweets to her. Then they put sindur on each other's faces and offer sweets to each other.

Sindur Khela symbolizes the power of womanhood in protecting her husband and children from all evil. Through the ritual of Sindur Khela, the Bengali Hindu women pray for long and happy married lives of each other. Family tiffs and petty quarrels between neighbours are settled through this ritual. Unmarried women and widows were barred from participating in the ritual, but a recent campaign by the Calcutta Times has revived the practice of just women - be it married, widowed, transgender individuals or women of the red-light area, to play with Sindoor to show that this is a universal bonding for all women, all sisters and not restricted only to married women.

Durga Pujo is celebrated for 10 days and the Pandals with grand idols of Goddess Durga are open for visitors. The last day, also known as Dashami, marks the idol's Visarjan (immersion in water) with grand celebrations and processions. Durga Puja 2022 began on October 1st and had its last day, or Dusshera, on the 5th October. I witnessed the Visarjan and how the idols are taken to the edge of the river before immersion. The pre-immersion procession is marked with fanfare and shouts of Jai Durga Mata.

Durga Pujo is an experience to be cherished and I am glad, I was part of this unforgettable experience.

## ಅಭಿನಂದನೆಗಳು



### ಸದ್ವಿನ್ ಮುಡಿಗೆ ಡಾನ್ಸ್ ಕರ್ನಾಟಕ ಡಾನ್ಸ್ ಕಿರೀಟ

ಬೆಂಗಳೂರು ಬಂಟರ ಸಂಘದ ಸದಸ್ಯರಾದ ಸತೀಶ್ ಕುಮಾರ ಶೆಟ್ಟಿ ಹಾಗೂ ಮಮತಾ ಎಸ್. ಶೆಟ್ಟಿಯವರ ಮಗ ಸದ್ವಿನ್ ಬಾಲ್ಯದಿಂದಲೂ ಡಾನ್ಸ್‌ನಲ್ಲಿ ಆಸಕ್ತಿ, ಶ್ರದ್ಧೆ, ಪರಿಶ್ರಮದೊಂದಿಗೆ ಹಂತ ಹಂತವಾಗಿ ಬೆಳೆದು ಇಂದು ಪ್ರತಿಷ್ಠಿತ ಡಾನ್ಸ್ ಕರ್ನಾಟಕ ಡಾನ್ಸ್ ಮುಖೇನ ಮನೆ ಮಾತಾಗಿ, ಒಟ್ಟು 46 ಅವತರಣಿಕೆಗಳಲ್ಲಿ 25 ಬಾರಿ ಸ್ಪರ್ಧೆಯಲ್ಲಿ ಜಯಿಸಿ ಕೊನೆಗೆ ಡಿಕೆಡಿಯ ಚಾಂಪಿಯನ್ ಆಗಿ 30 ಲಕ್ಷ ಬಹುಮಾನ ಮುಡಿಗೇರಿಸಿಕೊಂಡಿದ್ದಾರೆ. ಇಂಜಿನಿಯರಿಂಗ್ ವಿದ್ಯಾರ್ಥಿಯಾಗಿರುವ ಸದ್ವಿನ್ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದ ಹಳೆ ವಿದ್ಯಾರ್ಥಿ. ಬೆಂಗಳೂರು ಬಂಟರ ಸಂಘದ ಸರ್ವಸದಸ್ಯರ ಪರವಾಗಿ ಇವರಿಗೆ ಅಭಿನಂದನೆಗಳು.

# *Dasara Festival was Celebrated in BSRNSV-2 by Pre Primary Wing*





Teachers had made a wonderful backdrop and 5 steps of dolls were displayed for 3 days. Bunts Sangha Bangalore President Sri M. Muralidhar Hegde joined for the pooja. LKG children presented a dandiya dance followed by distribution of prasada. The last day Saraswathi Pooja was organized wherein all the wing staff had participated.

# ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ



ಭೂಮಿಕ ಪ್ರದೀಪ್ ಶೆಟ್ಟಿ

ಈ ಮೇಲ್ಕಂಡ ಗಾದೆಯ ಮಾತು ಇಂದು ನನಗೆ ಬೇರೆಯೇ ರೀತಿ ಭಾಸವಾಗುತ್ತಿದೆ. ಶಾಲೆಯಲ್ಲಿ ಓದುವ ಸಮಯದಲ್ಲಿ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಗೆಲ್ಲುವ ಛಲದ ಭರದಲ್ಲಿ ಮೇಲ್ಕಂಡ ವಾಕ್ಯದ ಒಳಾರ್ಥವನ್ನು ಅರಿಯಲಿಲ್ಲ. ಒಳಾರ್ಥವನ್ನು ಅರಿಯುವ ವಯಸ್ಸು ಅದಾಗಿರಲಿಲ್ಲ.

ಅಂದು ಬಹುಮಾನ ಗೆಲ್ಲಲು ಪ್ರಬಂಧ ಬರೆಯುತ್ತಿದ್ದೆವು. ಇಂದು ಅನುಭವಗಳು ಪೆನ್ನು ಹಿಡಿಯುವಂತೆ ಮಾಡಿದೆ, ಹಾಗಂತ ನನಗೆ ಈ ಗಾದೆ ಭಾಸವಾದಂತೆ ನಿಮ್ಮೆಲ್ಲರಿಗೂ ಆಗಬೇಕು ಎಂಬ ಕಡ್ಡಾಯವೇನಿಲ್ಲ ಬಿಡಿ. ಮನಸ್ಸಿನ ಕೆಲ ತುಣುಕುಗಳನ್ನು ಬರೆಯಲು ಹೊರಟಿರುವೆ. ಪ್ರಶ್ನೆಯೋ ಅಥವಾ ಅನುಭವದ ಮಾತುಗಳು ಎನ್ನಲಿಕ್ಕೆ ಅಷ್ಟೊಂದು ವಯಸ್ಸು ನನ್ನದೇನಿಲ್ಲ ಬಹುಶಃ ಅನುಭವಕ್ಕೆ ವಯಸ್ಸಾಗಬೇಕೆಂದೇನಿಲ್ಲಾ ಅಲ್ವಾ. ಪೀಠಿಕೆ ಸಾಕು ಅನ್ನಿಸುತ್ತೆ, ವಿಷಯಕ್ಕೆ ಬರ್ತೀನಿ, ಈ ಗಾದೆಯನ್ನು ರಚಿಸಿದವರು ಯಾರು? ರಚಿಸಿದ ಪರಿ ಏನಿರಬಹುದು? ಎಂಬುದು ನನ್ನನ್ನು ಯೋಚನೆಗೆ ತಳ್ಳುವ ಕೆಲಸ ಮಾಡುತ್ತಿದೆ. ಯಾರೋ ರಚಿಸಿರುವ ಗಾದೆಗೆ ನಾವೆಲ್ಲರೂ ಬದ್ಧರಾಗಿರುವುದು ಯೋಚನೀಯವೋ, ಖಂಡನೀಯವೋ, ನಾನರಿಯೆ. ಒಬ್ಬ ವ್ಯಕ್ತಿ ತನ್ನ ಕೆಟ್ಟ ಆರ್ಥಿಕ ಪರಿಸ್ಥಿತಿಗೋ ಅಥವಾ ಬೇರೆ ಏನೋ ಪರಿಸ್ಥಿತಿ ಒತ್ತಡಕ್ಕೆ ಒಳಗೊಂಡು ಗಾದೆಯನ್ನು ರಚಿಸಿರಬಹುದು ಅಲ್ವೇ? ಹಾಗಿದ್ದ ಮೇಲೆ ಇಂದೂ ಕೂಡ ಈ ವಾಡಿಕೆಯ ಅಗತ್ಯವಿದೆಯೋ ನನಗೆ ತಿಳಿದಿಲ್ಲ. ಈ ವಾಡಿಕೆಯನ್ನು ಪಾಲಿಸುತ್ತಿಲ್ಲವೆಂಬುದು ನಿಜವಾಗಿದ್ದರೆ ಮದುವೆಯಾಗದ ಹೆಣ್ಣನ್ನು ದೂಷಿಸುವುದು ಸರಿಯೇ. ನೋಡುವ ನೋಟ ಬದಲಾಗುವುದು ಏಕೆ?

ಇನ್ನೂ ಮದುವೆ ಮಾಡಿಕೊಡುವ ಹೆಣ್ಣಿನ ತಂದೆ ತಾಯಿಯು ಕಣ್ಣೀರಿಡುವ ಅರ್ಥವೇನು? ನೀನು ಇನ್ನು ಮುಂದೆ ನಮ್ಮ ಮಗಳಲ್ಲ ಎಂದೇ ಅಥವಾ ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ ಎಂಬ ಅನಾಮಧೇಯ ರಚನೆಯ ಗಾದೆಯಿಂದೇ. ಎಷ್ಟೋ ವಿಚಿತ್ರಗಳಿಗೆ ಬದ್ಧವಾಗಿರುವ ನಮ್ಮೆಲ್ಲರ ಯೋಚನಾ ಶಕ್ತಿಯನ್ನು ಬದಲಾಯಿಸಿಕೊಳ್ಳಬೇಕಾಗುತ್ತದೆ, ಹೇಗೆ ಕೊಟ್ಟ ಗಂಡು ಕುಲಕ್ಕೆ ಹೊರಗೆ ಅಲ್ಲವೋ, ಅದೇ ರೀತಿ ಕೊಟ್ಟ ಹೆಣ್ಣು ಕೂಡ ಕುಲಕ್ಕೆ ಹೊರಗೆ ಅಲ್ಲವೆಂಬ ಭಾವನೆ ಎಲ್ಲರಲ್ಲಿ ಬಂದರೆ, ಪ್ರತಿ ಹೆಣ್ಣಿನ ತಂದೆ–ತಾಯಿಯು ಸಂತೋಷದಿಂದ ಮಗಳ ಧಾರೆಯೆರೆದು ಕೊಡುತ್ತಾರೆನೋ ಎಂಬುವುದು ನನ್ನ ಅನಿಸಿಕೆ.

# ಮಹಿಳಾ ವಿಭಾಗ – ದಸರಾ ಆಚರಣೆ



ಬೆಂಗಳೂರು ಬಂಟರ ಸಂಘದ ಮಹಿಳಾ ವಿಭಾಗದ ವತಿಯಿಂದ ದಸರಾ ಆಚರಣೆಯನ್ನು ದಿನಾಂಕ 01.10.2022ರ ಶನಿವಾರದಂದು ಮಧ್ಯಾಹ್ನ 2.00 ಘಂಟೆಗೆ ಬಂಟರ ಸಂಘದ ಆವರಣದಲ್ಲಿ ಬಹಳ ಸಂಭ್ರಮದಿಂದ ಆಚರಿಸಲಾಯಿತು. ಮಹಿಳಾ ವಿಭಾಗದ ಚೇರ್‌ಪರ್ಸನ್ ಶ್ರೀಮತಿ ಮಾಲತಿ ಜೆ. ಶೆಟ್ಟಿ ಮತ್ತು ಸಂಚಾಲಕಿಯಾದ ಶ್ರೀಮತಿ ವಿಜಯಲಕ್ಷ್ಮೀ ಎಸ್. ಶೆಟ್ಟಿಯವರು ಎಲ್ಲರನ್ನೂ ಕಾರ್ಯಕ್ರಮಕ್ಕೆ ಪ್ರೀತಿಯಿಂದ ಸ್ವಾಗತಿಸಿದರು.

ಸಂಘದ ಅಧ್ಯಕ್ಷರಾದ ಶ್ರೀ ಎಂ. ಮುರಲೀಧರ ಹೆಗ್ಡೆಯವರು ದೀಪವನ್ನು ಬೆಳಗಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ಕಾರ್ಯಕ್ರಮದಲ್ಲಿ ಸಂಘದ ಮಾಜಿ ಮತ್ತು ಪ್ರಸಕ್ತ ಸಾಲಿನ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಗಣಪತಿ ಸ್ತುತಿಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮ ಬಂಟರ ಗೀತೆ ಎಂಬ ಮಹಿಳಾ ವಿಭಾಗದ ಮಹಿಳೆಯರಿಂದ ಹಾಡಿದ ವಿಶೇಷ ಹಾಡು ಕಾರ್ಯಕ್ರಮಕ್ಕೆ ಮೆರುಗನ್ನು ನೀಡಿತು. ಅಧ್ಯಕ್ಷರು ಮತ್ತು ಮಹಿಳಾ ಉಪಾಧ್ಯಕ್ಷೆ ಶ್ರೀಮತಿ ಗೀತಾಂಜಲಿ ಡಿ. ಅಜಿಲರವರು ಎಲ್ಲರಿಗೂ ಶುಭ ಹಾರೈಸಿದರು.

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ದೇವಿಯ ಲಲಿತ ಸಹಸ್ರನಾಮ, ಭಜನೆ, ದೇವಿ ನೃತ್ಯ, ದಾಂಡಿಯಾಗಳು ಅಂದಿನ ಕಾರ್ಯಕ್ರಮವನ್ನು ಮೆರುಗುಗೊಳಿಸಿತು. ಇದರ ಜೊತೆಗೆ ಸುಂದರರಾಮ್ ಶೆಟ್ಟಿ ನಗರದ ಬಂಟ ಮಹಿಳೆಯರ ವಿಶೇಷ ದಾಂಡಿಯಾ ನೃತ್ಯ ಎಲ್ಲರನ್ನು ಆಕರ್ಷಿಸಿತು. ಇದರೊಂದಿಗೆ ದೇವಿಯ ಪೂಜೆಯನ್ನು ಅತ್ಯಂತ ಭಕ್ತಿಪೂರ್ವಕವಾಗಿ ಮಾಡಲಾಯಿತು. ನಂತರ ಪ್ರಸಾದ ವಿತರಣೆಯು ನಡೆಯಿತು.

ಸಂಘದ ಹೊರಾಂಗಣದಲ್ಲಿ ಬಂಟ ಮಹಿಳೆಯರಿಂದ ನಡೆದ ದಾಂಡಿಯಾ ನೃತ್ಯವು ಇಡೀ ಕಾರ್ಯಕ್ರಮಕ್ಕೆ ಒಂದು ಹೊಸ ಮೆರುಗನ್ನು ನೀಡಿತು. ಈ ಕಾರ್ಯಕ್ರಮದ ಮೂಲಕ ದೇವಿಯ ಅನುಗ್ರಹವು ಎಲ್ಲರಿಗೂ ದೊರಕಿದೆ ಎಂಬ ಆನಂದ ನಮಗಿದೆ.

**ಮಾಲತಿ ಜೆ. ಶೆಟ್ಟಿ.**
ಚೇರ್‌ಪರ್ಸನ್, ಮಹಿಳಾ ವಿಭಾಗ
**ವಿಜಯಲಕ್ಷ್ಮೀ ಎಸ್. ಶೆಟ್ಟಿ.**
ಸಂಚಾಲಕಿ, ಮಹಿಳಾ ವಿಭಾಗ

# Dasara Celebration at Bunts Sangha R.N.S. Vidyaniketan



Festivals in India do not reflect religion. They teach us to rise above despite odd conditions with new aspirations and hopes.



The Dasara festival was celebrated at the Bunts 'Sangha RNS Vidyaniketan with all its spiritual divinity and sanctity. The celebration, in all its true sense illuminated the essence of the blend of gaiety and culture in life.

## ಬಂಟರ ಸಂಘ ಬೆಂಗಳೂರು
## BUNTS' SANGHA BANGALORE



ನಮ್ಮ ಸಂಘದ ಸದಸ್ಯರಾದ ಶ್ರೀ ಪ್ರವೀಣ್ ಶೆಟ್ಟಿ ಯವರ ಶಿವನಹಳ್ಳಿಯ ಬೇಕರಿಯಲ್ಲಿ ದಿನಾಂಕ 04.10.2022 ರಂದು ಸಂಭವಿಸಿದ ಬೆಂಕಿ ಅವಘಡಕ್ಕೆ ಸಂಬಂಧಿಸಿದಂತೆ, ಆರ್ಥಿಕ ಸಹಾಯಕ್ಕಾಗಿ ಅವರು ಸಂಘಕ್ಕೆ ಸಲ್ಲಿಸಿರುವ ಮನವಿಗೆ ಸ್ಪಂದಿಸಿ, ಬೆಂಗಳೂರು ಬಂಟರ ಸಂಘದ ವತಿಯಿಂದ ದಿನಾಂಕ 20.10.2022 ರಂದು ಸಂಜೆ 6 ಗಂಟೆಗೆ ಸಂಘದ ಕಛೇರಿಯಲ್ಲಿ ಆಡಳಿತ ಮಂಡಳಿ, ಕಾರ್ಯಕಾರಿ ಸಮಿತಿ ಮತ್ತು ಸಮಾಜ ಸೇವಾ ಸಮಿತಿಯ ಸಮ್ಮುಖದಲ್ಲಿ ಸಂತ್ರಸ್ತರಿಗೆ 1ಲಕ್ಷರೂ. ಗಳ ಚೆಕ್‌ನ್ನು ಹಸ್ತಾಂತರಿಸಲಾಯಿತು. ಸಮಾಜ ಸೇವಾ ಸಮಿತಿಯ ಮನವಿಗೆ ಸ್ಪಂದಿಸಿ, ಉದಾರ ದೇಣಿಗೆ ನೀಡಿದ ತಮಗೆಲ್ಲರಿಗೂ ತುಂಬು ಹೃದಯದ ಧನ್ಯವಾದಗಳು.

**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ಸಬನ್ ಶೆಟ್ಟಿ, ಗುಡಿಬೆಟ್ಟು**
ಸಂಚಾಲಕರು

ಸಮಾಜ ಸೇವಾ ಸಮಿತಿ

**ಸುದೀಪ್ ನಾಯಕ್**
ಚೇರ್‌ಪರ್ಸನ್

---

## ಬಂಟರ ಸಂಘ ಬೆಂಗಳೂರು

## ಬಂಟ್ಸ್ ಸೇವಾದಳ

ಹುಟ್ಟು ಹಾಗೂ ಸಾವು ಮನುಷ್ಯ ಜೀವನದ ಸಹಜ ಪ್ರಕ್ರಿಯೆಗಳಾಗಿದ್ದು, ಬೆಂಗಳೂರು ಹಾಗೂ ಸುತ್ತಮುತ್ತ ನೆಲೆಸಿರುವ ಸಮಾಜ ಬಾಂಧವರ ನಿಧನದ ಸಂದರ್ಭದಲ್ಲಿ ಬಂಟ್ಸ್ ಸೇವಾದಳ ಸಮಿತಿಯ ವತಿಯಿಂದ ಮೃತರ ಅಂತ್ಯಕ್ರಿಯೆ ವಿಧಿ-ವಿಧಾನ ನೆರವೇರಿಸಲು ಅಗತ್ಯ ಸಹಕಾರ / ಮಾಹಿತಿ ನೀಡಲು ಹಾಗೂ ಅಂತ್ಯಕ್ರಿಯೆಗೆ ಬೇಕಾಗುವ ಸಾಮಾಗ್ರಿ ಮತ್ತು ಇನ್ನಿತರ ಮಾಹಿತಿಯನ್ನು ಒದಗಿಸಲು ನಿರ್ಧರಿಸಲಾಗಿದೆ.
ಸದಸ್ಯ ಬಾಂಧವರು ತುರ್ತು ಸಂದರ್ಭದಲ್ಲಿ ಈ ಕೆಳಗಿನ ಮೊಬೈಲ್ ಸಂಖ್ಯೆಗಳನ್ನು ಸಂಪರ್ಕಿಸಬಹುದಾಗಿದೆ.

**ಮೊ : 97412 20559 / 70221 19739.**

**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ಸತೀಶ್ ಶೆಟ್ಟಿ. ವಾಲ್ತೂರು**
ಸಂಚಾಲಕರು, ಬಂಟ್ಸ್ ಸೇವಾದಳ

**ಉಮೇಶ್ ಕುಮಾರ್ ಶೆಟ್ಟಿ**
ಚೇರ್‌ಪರ್ಸನ್, ಬಂಟ್ಸ್ ಸೇವಾದಳ

# ಕಾಲಾತೀತ ಅತ್ಯಂತ ಪವಿತ್ರ ರಾಜರಾಜೇಶ್ವರ ದೇವಾಲಯ




ಎ. ಗಿರೀಶ್ ರೈ

**ಕರಾವಳಿ ಜಿಲ್ಲೆ ದಕ್ಷಿಣ ಕನ್ನಡದ ದಕ್ಷಿಣ ಭಾಗದಲ್ಲಿರುವ ಕೇರಳ ರಾಜ್ಯದ ಕಾಸರಗೋಡಿನ ಪಯ್ಯನ್ನೂರು ಸಮೀಪ 'ತಲಿಪರಂಬ, (ತಲಿ ಪರಂಬು)ನಲ್ಲಿ ನೆಲೆಸಿರುವ ಶಿವಾಲಯ ದೇವರ ನಾಡು ಕೇರಳ ರಾಜ್ಯದ 108 ಶಿವಾಲಯಗಳಲ್ಲಿ ಪ್ರಮುಖವಾಗಿದೆ. ಕಲಿಯುಗ ಪ್ರಾರಂಭವಾಗುವ ಹಲವಾರು ಶತಮಾನಗಳ ಮೊದಲು ಪರಶುರಾಮರು ಇಲ್ಲಿಗೆ ಭೇಟಿ ನೀಡಿದ್ದು ಅಂದು ಶಿತಿಲಾವಸ್ಥೆಯಲ್ಲಿದ್ದ ಈ ದೇವಾಲಯವನ್ನು ಪುನರುಜ್ಜೀವನಗೊಳಿಸಿದ್ದರೆಂದು ಪ್ರತೀತಿ. ಕೇರಳದ ಕಣ್ಣೂರು ಜಿಲ್ಲೆಯ "ತಲಿಪರಂಬ"ದಲ್ಲಿರುವ ಜ್ಯೋತಿರ್ಲಿಂಗ ಅತೀ ಶಕ್ತಿಯುತವಾಗಿದ್ದು, ಭಕ್ತರ ಆಧ್ಯಾತ್ಮಿಕ ಮತ್ತು ಲೌಖಿಕ ಜೀವನದಲ್ಲಿ ಪ್ರಭಾವ ಬೀರುತ್ತಿರುವುದು ಕಂಡು ಬರುತ್ತಿದೆ.**


ಮಹರ್ಷಿ ಪರಶುರಾಮರು ರಾಜರಾಜೇಶ್ವರ ಶಿವಮಂದಿರಕ್ಕೆ ಭೇಟಿ ನೀಡಿದ್ದಾಗ ಅತ್ಯಂತ ಶಿಥಿಲವಾಗಿ ಮುರಿದು ಬಿದ್ದಿದ್ದ ಈ ಪವಿತ್ರ ಮಂದಿರವನ್ನು ನೋಡಿ ಶೋಕತಪ್ತರಾದರು. ಈ ದೇವಾಲಯದ ಪುರಾಣೇತಿಹಾಸವನ್ನು ತಿಳಿಯಲು ಬಯಸಿದ್ದರು. ಆಗ ನಾರದರು ಪ್ರತ್ಯಕ್ಷರಾಗಿ ಇದರ ಚರಿತ್ರೆಯನ್ನು ವಿವರಿಸಲು ಮುಂದಾದರು. ಅವರು ತಿಳಿಸಿದಂತೆ ಮುನಿ ಸನಕ ಮತ್ತು ಬ್ರಹ್ಮ ದೇವರ ಪುತ್ರರು ಸೂರ್ಯನ ವಿಪರೀತ ಶಾಕವನ್ನು ಕಡಿಮೆಗೊಳಿಸಲು ಸೂರ್ಯ ವೃತ್ತವನ್ನು ತಿರುಗಿಸಲು ಪ್ರಾರಂಭಿಸಿದಾಗ ಹೊರಬಂದ ಧೂಳನ್ನು ಅಮೃತವನ್ನು (ಡಿವ್ಯಾನ್ ನೆಕ್ಟರ್) ಬಳಸಿದಾಗ ಮೂರು ಅತ್ಯಂತ ಪವಿತ್ರ ಹಾಗೂ ಶಕ್ತಿಶಾಲಿ ಶಿವಲಿಂಗಗಳು ಉದ್ಭವವಾಯಿತು. ಈ ಶಿವಲಿಂಗಗಳನ್ನು ಬ್ರಹ್ಮದೇವರಿಗೆ ಒಪ್ಪಿಸಲಾಯಿತು. ಬ್ರಹ್ಮದೇವರು ಪವಿತ್ರ ಶಿವಲಿಂಗಗಳನ್ನು ಕೆಲಕಾಲ ಪೂಜಿಸಿದ್ದರು. ತದನಂತರ ಈ ಮೂರು ಶಿವಲಿಂಗಗಳನ್ನು ಪಾರ್ವತಿ ದೇವಿಗೆ ನೀಡಿದ್ದರು.

ಪಾರ್ವತಿದೇವಿ ಈ ಮೂರು ಶಿವಲಿಂಗಗಳನ್ನು ತನ್ನನ್ನು ಭಕ್ತಿಯಿಂದ ಆರಾಧಿಸುತ್ತಿದ್ದ ಮೂವರು ರಾಜರಿಗೆ ಒಂದನ್ನು ತ್ರೇತಾಯುಗದಲ್ಲಿ ಇನ್ನೆರಡನ್ನು, ದ್ವಾಪರಯುಗದಲ್ಲಿ ನೀಡಿದ್ದರು. ಮೊದಲನೆಯದಾಗಿ ಮಾಂಧಾತ ರಾಜ ತೇತ್ರಾಯುಗದಲ್ಲಿ, ಇನ್ನೆರಡನ್ನು ಮುಚುಕುಂದನ್ ಮತ್ತು ಶತಸೋಮನ್ ಅವರು ದ್ವಾಪರಯುಗದಲ್ಲಿ ಪಡೆದಿದ್ದರು. ಈ ಶಿವಲಿಂಗಗಳನ್ನು ಪರಿಶುದ್ಧ ಸ್ಥಳದಲ್ಲಿ, ಯಾರೂ ಮರಣ ಹೊಂದಿರದ ಹಾಗೂ ಯಾವುದೇ ಪ್ರಾಣಿ ಇತರ ಮೃತ ದೇಹ ಮುಟ್ಟಿರದ ಪವಿತ್ರ ನೆಲದಲ್ಲಿ ಪ್ರತಿಷ್ಠಾಪನೆ ಮಾಡಬೇಕೆಂದು ಪಾರ್ವತಿ ದೇವಿಯ ಆಜ್ಞೆಯಾಗಿತ್ತು. ಪ್ರಥಮ ಲಿಂಗವನ್ನು ಪಡೆದ ಮಾಂಧಾತ ರಾಜ ಸೂಕ್ತ ಜಾಗವನ್ನು ಅರಸುತ್ತಾ ಎಲ್ಲ ಕಡೆ ಪರಿಕ್ರಮಿಸುತ್ತಾನೆ. ಹಲವಾರು ಜಾಗಗಳನ್ನು ಅರಸುತ್ತಾ ಕೊನೆಗೆ ಒಂದು ಸೂಕ್ತ ಜಾಗವನ್ನು ಗುರುತಿಸುತ್ತಾನೆ. ಅದೊಂದು ತಟ್ಟೆಯ ಆಕಾರದಲ್ಲಿದ್ದು, ಅಲ್ಲಿ ಶಿವಲಿಂಗವನ್ನು ಸ್ಥಾಪಿಸಲು ನೆಲದಲ್ಲಿ ಕುಳ್ಳಿರಿಸುತ್ತಾನೆ. ಒಡನೆಯೇ ಶಿವಲಿಂಗ ನೆಲದ ಅಡಿಯಲ್ಲಿ ಅದೃಶ್ಯವಾಗುತ್ತದೆ. ಇದರೊಂದಿಗೆ ತೇತ್ರಾಯುಗ ಕೊನೆಗೊಂಡಿದ್ದು, ದ್ವಾಪರಯುಗ ಪ್ರಾರಂಭವಾಯಿತು. ಎರಡನೆ ಜ್ಯೋತಿರ್ಲಿಂಗವನ್ನು ಪಡೆದ ಇನ್ನೋರ್ವ ರಾಜ ಮುಚುಕುಂದನ್ ಪಾರ್ವತಿ ದೇವಿ ಸೂಚಿಸಿದ್ದ ಪ್ರಶಸ್ತ ಜಾಗವನ್ನು ಹುಡುಕುತ್ತಾ ಹಲವಾರು ಕಡೆ ಪ್ರಯಾಣ ಮಾಡುತ್ತಾನೆ. ಮಾಂಧಾತ ರಾಜನು ಶಿವಲಿಂಗವನ್ನು ನೆಲದ ಮೇಲಿಟ್ಟಿದ್ದ ಅದೇ ಜಾಗಕ್ಕೆ ಬಂದು ಇದು ಉತ್ತಮ ಜಾಗವೆಂದು ಭಾವಿಸಿ ಶಿವಲಿಂಗವನ್ನು ಅಲ್ಲಿ ಸ್ಥಾಪಿಸಲು ಮುಂದಾಗುತ್ತಾನೆ. ಈ ಶಿವಲಿಂಗವೂ ಭೂಮಿ ಅಡಿಯಲ್ಲಿ ಅಗೋಚರವಾಗುತ್ತದೆ. ಪಾರ್ವತಿ ದೇವಿಯಿಂದ ಮೂರನೇ ಶಿವಲಿಂಗವನ್ನು ಪಡೆದ ರಾಜ ಶತಸೋಮನ್ ಜಾಗ ಹುಡುಕುತ್ತಾ ಊರೆಲ್ಲಾ ಅಲೆದು ಹಿಂದೆ ಎರಡು ಶಿವಲಿಂಗಗಳು ಭೂಗರ್ಭದಲ್ಲಿ ಕಣ್ಮರೆಯಾದ ಜಾಗಕ್ಕೆ ಬರುತ್ತಾನೆ. ಇದು ಅತ್ಯುತ್ತಮ ಪರಮ, ಪೂಜನೀಯ ತಾಣವೆಂದು ಭಾವಿಸಿ ಶಿವಲಿಂಗವನ್ನು ಪ್ರತಿಷ್ಠಾಪಿಸಲು ಮುಂದಾಗುತ್ತಾನೆ. ಶಿವಲಿಂಗ ನೆಲೆಗೊಳ್ಳದೆ ನೆಲದಡಿಗೆ ಅದೃಶ್ಯವಾಗಲು ಪ್ರಾರಂಭಿಸುತ್ತದೆ. ರಾಜನು ಮಹರ್ಷಿ ಅಗಸ್ತ್ಯರನ್ನು ಪ್ರಾರ್ಥಿಸಿ ಸನ್ನಿವೇಶವನ್ನು ವಿವರಿಸಿ ತನಗೆ ತಕ್ಷಣ ಸಹಾಯ ಮಾಡಬೇಕೆಂದು ಬೇಡಿಕೊಳ್ಳುತ್ತಾನೆ. ಅಗಸ್ತ್ಯಮುನಿವರೇಣ್ಯರು ತತ್‌ಕ್ಷಣ ಪ್ರತ್ಯಕ್ಷರಾಗಿ ತುಪ್ಪದ ದೀಪವನ್ನು ಬೆಳಗಿಸಿ ಶಿವಲಿಂಗಕ್ಕೆ ಹನ್ನೆರಡು ಬಾರಿ ಭಕ್ತಿಯಿಂದ ಸಾಷ್ಟಾಂಗ ನಮಸ್ಕಾರ ಮಾಡಿ ಜ್ಯೋತಿರ್ಲಿಂಗ ಇಲ್ಲಿ ನೆಲಗೊಳ್ಳಬೇಕೆಂದು ತುಪ್ಪದ ದೀಪ ಹಚ್ಚಿ ಪ್ರಾರ್ಥನೆಯೊಂದಿಗೆ ಹದಿಮೂರನೇ ಸಾರಿ ಸಾಷ್ಟಾಂಗ ನಮಸ್ಕಾರ ಮಾಡಲು ಪ್ರಾರಂಭಿಸಿದೊಡನೆ ಜ್ಯೋತಿರ್ಲಿಂಗ

ಭೂಮಿಯಲ್ಲಿ ಭದ್ರವಾಗಿ ಪ್ರತಿಷ್ಠಾಪನೆಗೊಂಡಿತು. ಅಗಸ್ತ್ಯರು ಮಾಡಿರುವ ಸಾಷ್ಟಾಂಗ ನಮಸ್ಕಾರ ಹನ್ನೆರಡು ಮತ್ತು ಅರ್ಧವೆಂದು ಪ್ರಸಿದ್ಧಿ ಪಡೆಯಿತು. ಮಳೆಯಾಳಿ ಭಾಷೆಯಲ್ಲಿ ತಳಿಕ ಅಂದರೆ ತಟ್ಟೆ ಎಂದರ್ಥ. ಇಂತಹ ಸ್ಥಳದಲ್ಲಿ ಜ್ಯೋತಿರ್ಲಿಂಗ ಪ್ರತಿಷ್ಠಾಪನೆಗೊಂಡಿರುವುದರಿಂದ ತಲಿಪರಂಬ ಎಂದು ಹೆಸರುವಾಸಿಯಾಯಿತು. ಈ ಸ್ಥಳದ ಪಾವಿತ್ರ್ಯ ಮೂರು ಪಟ್ಟು ಅಧಿಕಗೊಂಡಿತು. ಅಗಸ್ತಮಹರ್ಷಿ ಅಂದು ಹಚ್ಚಿದ ದೀಪ **ಭದ್ರ ದೀಪವೆಂದು** ಪ್ರಖ್ಯಾತವಾಗಿ ದೀಪ ಈಗಲೂ ಉರಿಯುತ್ತಿದೆ. ಪರಶುರಾಮರು ಶಿಥಿಲಾವಸ್ಥೆಯಲ್ಲಿದ್ದ ಈ ಮಂದಿರವನ್ನು ಮಾನವ ಕಲ್ಯಾಣಕ್ಕಾಗಿ ಪುನರುಜ್ಜೀವನಗೊಳಿಸಬೇಕೆಂದು ಸಂಕಲ್ಪ ಮಾಡಿ ದೇವ ಶಿಲ್ಪಿ ವಿಶ್ವಕರ್ಮರಿಗೆ ದೇವಾಲಯ ನಿರ್ಮಾಣದ ಕಾರ್ಯ ನಡೆಸಬೇಕೆಂದು ಹೇಳುತ್ತಾರೆ. ಅಂತೆಯೇ ನಿರ್ಮಾಣ ಕಾರ್ಯ ಪೂರ್ಣಗೊಳ್ಳುತ್ತದೆ. ಈ ದೇವ ಮಂದಿರದಲ್ಲಿ ಚಿನ್ನ, ಬೆಳ್ಳಿ ಅಥವಾ ಕಂಚಿನ ಚಿಕ್ಕ ಪಾತ್ರೆಯಲ್ಲಿ ಭಕ್ತಿಯಿಂದ ದೀಪಕ್ಕೆ ತುಪ್ಪ ಅರ್ಪಿಸುವುದು ರಾಜರಾಜೇಶ್ವರ ದೇವರಿಗೆ ಅತ್ಯಂತ ಪ್ರಿಯವಾದ ಸೇವೆಯಾಗಿದೆ.




ಪರಶುರಾಮರ ಹೃದಯದಲ್ಲಿ ಈ ಪಾವನ ದೇವಾಲಯವನ್ನು ಮಾನವ ಕಲ್ಯಾಣಕ್ಕೆ ಪುನರ್ ನಿರ್ಮಾಣ ಮಾಡಬೇಕೆಂದು ನಿರ್ಧರಿಸಿದ್ದರು. ಋಷಿ ಪರಶುರಾಮರು ಇಷ್ಟಪಟ್ಟಂತೆ ವಿಶ್ವಕರ್ಮರು ಪುನರ್ ನಿರ್ಮಾಣ ಕಾರ್ಯ ಪ್ರಾರಂಭಿಸಿದರು. ದೇವಾಲಯ ನಿರ್ಮಾಣ ಕಾರ್ಯ ಕೊನೆಯಾಗುತ್ತಿದ್ದಂತೆ ಅಗಸ್ತ್ಯ ಮಹರ್ಷಿಯರು ಪ್ರತ್ಯಕ್ಷರಾಗಿ ಶಿವಲಿಂಗಕ್ಕೆ ಅಭಿಷೇಕ ಮಾಡಿ ತುಪ್ಪದ ದೀಪ ಹಚ್ಚಿ ಪ್ರಾರಂಭೋತ್ಸವವನ್ನು ನೆರವೇರಿಸಿದ್ದು ಅಂದು ಹಚ್ಚಿದ ದೀಪ ಇಂದೂ ಉರಿಯುತ್ತಿರುವುದು (ತುಪ್ಪ ಸುರಿದು) ಇಲ್ಲಿಯ ವಿಶೇಷ. ಇಲ್ಲಿಯ ಪುರಾಣೇತಿಹಾಸ ಸ್ಥಳ ಪುರಾಣ ಎಲ್ಲವೂ ಆಧ್ಯಾತ್ಮಿಕತೆಯ ಸ್ಪಷ್ಟ ನಿದರ್ಶನವಾಗಿದ್ದು ಈ ನೆಲ ಅತ್ಯಂತ ಪವಿತ್ರವಾಗಿದೆ ಎಂಬ ಸತ್ಯವನ್ನು ವಿಶಧೀಕರಿಸುತ್ತದೆ. ಇಲ್ಲಿಗೆ ಭೇಟಿ ನೀಡಿರುವ ಪರಶುರಾಮ, ಅಗಸ್ತ್ಯಮುನಿ, ನಾರದ, ವಿಶ್ವಕರ್ಮ ಮೊದಲಾದ ಮಹಾತ್ಮರಿಂದ ಈ ಪ್ರದೇಶದಲ್ಲಿ ಯಾವುದೋ ಶಕ್ತಿ ನೆಲೆಯೂರಿದೆ ಅಂತೆಯೆ ಪಾವನ ಸ್ಥಳದಲ್ಲಿ ಭಕ್ತರು ಆಧ್ಯಾತ್ಮಿಕತೆ ಆಹ್ಲಾದಗೊಳಿಸಲು ಸಾಧ್ಯವಿದೆ.



ರಾಜರಾಜೇಶ್ವರ ದರ್ಶನ

ರಾಜರಾಜೇಶ್ವರ ದರ್ಶನ ಈ ದೇವ ಮಂದಿರದ ದರ್ಶನಕ್ಕೆ ಆಗಮಿಸುವ ಭಕ್ತರು ದಕ್ಷಿಣ ದಿಕ್ಕಿನಲ್ಲಿರುವ ವಸುದೇಶವಪುರಂ ಶ್ರೀ ಕೃಷ್ಣ ಕೊಳಲು ಹಿಡಿದಿರುವ ಸುಂದರ ಮೂರ್ತಿಯನ್ನು ಪೂಜಿಸಿ ಮುಂದುವರಿಯಬೇಕು. ಮಹರ್ಷಿ ಅಗಸ್ತ್ಯರ ಆಶ್ರಮ ರಾಜರಾಜೇಶ್ವರ ಮಂದಿರದ ಕೆರೆಯ ದಡದಲ್ಲಿತ್ತೆಂದು ಪ್ರತೀತಿ. ಇಲ್ಲಿಂದ ಮುಂದುವರಿದರೆ ಶ್ರೀ ಭೂತನಾಥ ಕುಂಬೋಧರ ಮಂದಿರವಿದೆ. ಭೂತನಾಥ ಶಿವನ ಪ್ರಿಯಗಣ. ಶ್ರೀಕೃಷ್ಣ ಹಾಗೂ ಭೂತನಾಥ ತಲಿಪರಂಬ ದೇವಾಲಯದ ಇತರ ಪ್ರಮುಖ ದೇವರುಗಳೆಂದು ಪರಿಗಣಿಸಲಾಗಿದೆ. ಶ್ರೀ ರಾಜರಾಜೇಶ್ವರ ದೇವಸ್ಥಾನದ ಸುತ್ತಲೂ ಎತ್ತರದ ಪ್ರಕಾರವಿದ್ದು, ಎರಡು ಗೋಪುರಗಳಿಂದ ಕೂಡಿದ್ದು ಮಂದಿರದ ಮಧ್ಯದಲ್ಲಿದೆ. ಪ್ರವೇಶ ದ್ವಾರ ಪೂರ್ವ ದಿಕ್ಕಿನಲ್ಲಿದ್ದು ದೇವಸ್ಥಾನಕ್ಕೆ ಪ್ರವೇಶಿಸುವ ಮೊದಲು ಶ್ರೀ ವೈದ್ಯನಾಥೇಶ್ವರ ಸ್ವಾಮಿಗೆ ಭಕ್ತಿಪೂರ್ವಕ ಕೈಮುಗಿದು ಮುಂದುವರಿಯುವುದು. ರಾಜರಾಜೇಶ್ವರ ಸ್ವಾಮಿ ಗರ್ಭಗುಡಿಗೆ ಪೂರ್ವದ ದ್ವಾರದ ಮೂಲಕ ಪ್ರವೇಶಿಸಿ ಸುತ್ತುವರಿದು ಮುಂದುವರಿದರೆ ಅಲ್ಲಿ ಚಿಕ್ಕ ಯಕ್ಷಿಯ ಗುಡಿ ಇದೆ. ಇಲ್ಲಿಯ ರಕ್ಷಕ ದೈವವಾದ ಯಕ್ಷಿ ಅಭ್ಯುದಯದ ಪ್ರತೀಕವಾಗಿದ್ದು ಭಕ್ತರಿಗೆ ಸಂಪತ್ತು, ಸೌಭಾಗ್ಯ ಶಾಂತಿ ನೀಡುವುದಾಗಿ ನಂಬಿಕೆ. ಶ್ರೀ ರಾಜರಾಜೇಶ್ವರ ಸ್ವಾಮಿಯ ದರ್ಶನದ ಮೊದಲು ವೃಷಭ, ನಂದಿ ನಮಸ್ಕರಿಸಿದ ನಂತರ ಗರ್ಭಗುಡಿಗೆ ಪ್ರವೇಶ.

**ನೀಲಾಂಬಳಂ ಗರ್ಭಗೃಹದ** ಹೊರಭಾಗ ಪ್ರವೇಶಿಸಿ ಪ್ರದಕ್ಷಿಣೆ ಮಾಡುತ್ತಾ ದಕ್ಷಿಣ ಪಶ್ಚಿಮ ಭಾಗಕ್ಕೆ ಬರುತ್ತಿರುವಾಗ ಅನ್ನಪೂರ್ಣೇಶ್ವರಿ ದೇವಿಗೆ ವಂದಿಸಿ ನಂತರ ಮುಂದುವರಿದರೆ ಪಶ್ಚಿಮ ದಿಕ್ಕಿನಲ್ಲಿ ಭದ್ರಕಾಳಿ ದೇವಿಯ ವಿಗ್ರಹವಿದೆ. ನೀಲಾಂಬಳಂದಿಂದ ಪ್ರದಕ್ಷಿಣೆ ಮಾಡುತ್ತಾ ಮಂದಿರದ ಪವಿತ್ರ ತಾಣ ಶ್ರೀ ರಾಜರಾಜೇಶ್ವರ ಜ್ಯೋತಿರ್ಲಿಂಗ ಹತ್ತಿರದಿಂದ ವೀಕ್ಷಿಸುವ ಅಪೂರ್ವ ಅವಕಾಶ. ಇಲ್ಲಿಯ ಪದ್ಧತಿಯಂತೆ ಪುರುಷರು ಮಾತ್ರ ನಿಲಾಂಬಳಂದಿಂದ ಪ್ರವೇಶ ಮಾಡಿ ಪ್ರಾರ್ಥನೆ, ಪೂಜೆ ಮಾಡಬಹುದು. ಆದರೆ ಮಹಿಳೆಯರು ಮುಖ್ಯಪೂಜೆಯ ನಂತರ ಈ ಭಾಗ ಪ್ರವೇಶ ಮಾಡಲು ಅವಕಾಶವಿದೆ. ಈ ಪೂಜೆಯ ನಂತರ ಸಾಯಂಕಾಲ ಶಿವ ಪಾರ್ವತಿ ಇಬ್ಬರೂ ಪ್ರಸನ್ನರಾಗಿರುತ್ತಿದ್ದು ಈ ಸಮಯ ಮಹಿಳೆಯರು ಶಿವಪಾರ್ವತಿಯರನ್ನು ಪೂಜಿಸುವುದು ಅತ್ಯಂತ ಪವಿತ್ರ ಮತ್ತು ಉತ್ತಮವೆಂದು ಪರಿಗಣಿಸಲಾಗಿದೆ. ಗರ್ಭಗುಡಿ ಮನೋಹರವಾಗಿದ್ದು ಕೇರಳದ ಶಿಲ್ಪಕಲೆಯ ಸುಂದರ ತಾಣವಾಗಿದೆ. ದೇವಸ್ಥಾನದ ಮೇಲ್ಭಾಗವನ್ನು ತಾಮ್ರದ ಹೊದಿಕೆಯಿಂದ ಮುಚ್ಚಿದ್ದು ತುದಿಯಲ್ಲಿ ಬಂಗಾರದ ಕಲಶವಿದೆ. ಗರ್ಭಗುಡಿಯ ನಾಲ್ಕು ದಿಕ್ಕಿನಲ್ಲಿ ನಾಲ್ಕು ಬಾಗಿಲುಗಳಿದ್ದು, ಪೂರ್ವ ಮತ್ತು ದಕ್ಷಿಣದ ಬಾಗಿಲುಗಳನ್ನು ಮೊದಲು ತೆರೆಯುತ್ತಾರೆ. ಜ್ಯೋತಿರ್ಲಿಂಗ ದರ್ಶನ ಪೂರ್ವದ್ವಾರದಿಂದ ಮಾಡಬೇಕು. ಇಲ್ಲಿ ಅನೇಕ ತುಪ್ಪದ ದೀಪಗಳು ಎಲ್ಲಾ ಭಾಗದಿಂದ ಉರಿಯುತ್ತಿರುತ್ತವೆ.

ಅಗಸ್ತ್ಯಋಷಿಯವರು ಪ್ರಥಮ ಬಾರಿಗೆ ಬೆಳಗಿಸಿದ್ದರೆಂದು ಹೇಳಲಾದ ಭದ್ರದೀಪಂ ಜ್ಯೋತಿರ್ಲಿಂಗದ ಎಡಭಾಗದಲ್ಲಿದ್ದು ಆಕರ್ಷಕ ಬೆಳಕಿನಿಂದ ಉರಿಯುತ್ತಿರುತ್ತದೆ. ಜ್ಯೋತಿರ್ಲಿಂಗದ ಎರಡೂ ಭಾಗದಲ್ಲಿ ದೀಪಗಳ ಸಾಲು ಸಾಲುಗಳಿದ್ದು, ತುಪ್ಪದಿಂದ ಉರಿಯುವ ದೀಪಗಳ ನೀಳವಿಲಕ್ಕು ಸುಂದರವಾಗಿದೆ. ಪ್ರತಿದಿನ ಜ್ಯೋತಿರ್ಲಿಂಗಕ್ಕೆ ತ್ರಿನೇತ್ರ, ಚಂದ್ರ, ನಾಗಭೂಷಣ ಮೊದಲಾದ ಶಿವನ ಪ್ರೀತಿಯ ವಿಶೇಷ ಆಭರಣಗಳಿಂದ ಅಲಂಕರಿಸಿ ಉತ್ಸವ ಮೂರ್ತಿಯೊಂದಿಗೆ ಬಂಗಾರದ ಆಭರಣಗಳು, ನವರತ್ನ ಪೆಂಡೆಂಟ್ ಮತ್ತು ಇತರ ಆಭರಣಗಳಿಂದ ಅಲಂಕರಿಸಲಾಗುತ್ತದೆ. ಜ್ಯೋತಿರ್ಲಿಂಗವನ್ನು ಎರಡು ಬಾರಿ ದರ್ಶನ ಮಾಡಲು ಅವಕಾಶವಿದೆ. ಪ್ರಾತಃಕಾಲ ಹಿಂದಿನ ದಿನದ ಅಲಂಕಾರವನ್ನು ತೆಗೆದು ಮೊದಲನೇ ಅಭಿಷೇಕ ಮಾಡಲಾಗುತ್ತದೆ, ನಂತರ ಜ್ಯೋತಿರ್ಲಿಂಗವನ್ನು ಬಂಗಾರದ ಗೋಲಕ್‌ದಿಂದ ಹೊದಿಸಲಾಗುತ್ತದೆ. ಭಕ್ತಾದಿಗಳು ಈ ನಿರ್ಮಲ ದರ್ಶನ ಮಾಡುವ ಅವಕಾಶವಿದ್ದು ಇದು ಬಹಳ ಪವಿತ್ರವೆಂದು ನಂಬಲಾಗಿದೆ.



ಭಕ್ತಾದಿಗಳು ಜ್ಯೋತಿರ್ಲಿಂಗವನ್ನು ಇನ್ನೊಂದು ಬಾರಿ ಬೆಳಿಗ್ಗೆ 9.30 ಘಂಟೆಗೆ ಮೂರನೇ ಪೂಜೆಯ ಕಲಶಾಭಿಷೇಕದ ನಂತರ ದರ್ಶನ ಮಾಡಲು ಅವಕಾಶವಿದೆ. ಗರ್ಭಗೃಹದ ಪಶ್ಚಿಮ ದಿಕ್ಕಿನಲ್ಲಿ ದೇವಿ ಪಾರ್ವತಿಯ ಆಸನವಿದೆ. ಈ ದ್ವಾರವನ್ನು ತೆರೆಯಲಾಗುತ್ತಿಲ್ಲ. ಇದರ ಕುರಿತಂತೆ ಶಿವ ಮತ್ತು ವಿಷ್ಣು ಕುರಿತ ಪುರಾಣೇತಿಹಾಸವಿದೆ. ಲಕ್ಷ್ಮೀ ದೇವಿ ಇಲ್ಲಿನ ಜ್ಯೋತಿರ್ಲಿಂಗ ದರ್ಶನಕ್ಕೆ ಬಂದಿದ್ದರು. ಶ್ರೀ ರಾಜರಾಜೇಶ್ವರ ಲಕ್ಷ್ಮೀ ದೇವಿಯನ್ನು ನೋಡುತ್ತಿದ್ದಂತೆ ದೇವಿಯ ಸೌಭಾಗ್ಯದ ಅಂಶ ಇಲ್ಲಿ ಸದಾವಿರಬೇಕೆಂದು ಭಾವಿಸಿ ತಕ್ಷಣ ಮಹಾವಿಷ್ಣುವಿನ ರೂಪದಲ್ಲಿ ಗೋಚರಿಸಿದಾಗ ಲಕ್ಷ್ಮೀ ದೇವಿ ತನ್ನ ಪತಿಯೇ ಇಲ್ಲಿರುವುದನ್ನು ಕಂಡು ಪಕ್ಕದಲ್ಲಿ ಆಸೀನರಾಗುತ್ತಾರೆ. ಆಗ ಶಿವ ತನ್ನ ನಿಜ ರೂಪದಲ್ಲಿ ಪ್ರತ್ಯಕ್ಷರಾದಾಗ ಮಹಾಲಕ್ಷ್ಮೀಗೆ ತನ್ನ ತಪ್ಪಿನ ಅರಿವಾಗುತ್ತದೆ. ರಾಜರಾಜೇಶ್ವರನಿಗೆ ವಂದಿಸಿ ದೇವಿ ಹಿಂದಿನ ಬಾಗಿಲಿನಿಂದ ನಿರ್ಗಮಿಸಲು ಹೋದಾಗ ಹಿಂದಿನ ಬಾಗಿಲನ್ನು ಮುಚ್ಚಲು ಶಿವನಿಂದ ತನ್ನ ಗಣಗಳಿಗೆ ಆದೇಶವಾಗುತ್ತದೆ. ಶ್ರೀ ಮಹಾಲಕ್ಷ್ಮೀ ದೇವಿ ಇಲ್ಲಿಗೆ ದರ್ಶನ ನೀಡಿ ಕೆಲ ಕಾಲ ಆಸೀನರಾಗಿದ್ದುದ್ದರಿಂದ ಈ ಮಂದಿರ ಇನ್ನೂ ಅಧಿಕ ಪಾವನವಾಯಿತು. ಇಲ್ಲಿಯ ವಾತಾವರಣ ಜಗಮಗಿಸಿತು. ಇದರಿಂದ ದರ್ಶನಾರ್ಥಿಗಳಿಗೆ ಒಳಿತಾಗಲಿದೆ ಎಂದು ರಾಜರಾಜೇಶ್ವರ ದೇವರ ಇಚ್ಛೆಯಾಗಿತ್ತು. ಮಹಾಲಕ್ಷ್ಮೀಯನ್ನು ಅರಸುತ್ತಾ ಮಹಾವಿಷ್ಣು ರಾಜರಾಜೇಶ್ವರ ಮಂದಿರಕ್ಕೆ ಬಂದಾಗ ಅಲ್ಲಿರುವವರೆಲ್ಲರೂ ಮಹಾಲಕ್ಷೀ ದೇವಿಯು ಇಲ್ಲಿಯೇ ಇದ್ದು ಭಕ್ತಾಧಿಗಳನ್ನು ಕರುಣಿಸಲೆಂದು ಬೇಡಿಕೊಳ್ಳುತ್ತಾರೆ. ಮಹಾವಿಷ್ಣು ಅಂತೆಯೇ ಆಗಲೆಂದು ವರದಾನ ನೀಡುತ್ತಾರೆ. ಇದರಿಂದಾಗೆ ಈ ಮಂದಿರದಲ್ಲಿ ಶೈವ ಮತ್ತು ವೈಷ್ಣವ ಪಂಥಗಳು ಸಮ್ಮಿಲನಗೊಂಡು ಪಾವಿತ್ರ್ಯ ಅಧಿಕವಾಗಿದೆ. ಇಲ್ಲಿರುವ ಜ್ಯೋತಿರ್ಲಿಂಗ ಬಹಳ ಪವಿತ್ರವಾಗಿದ್ದು, ರಾಜರಾಜೇಶ್ವರ ಎಂದು ಪ್ರಸಿದ್ಧಿ

ಪಡೆದಿದೆ. ಇತರ ಶಿವಾಲಯಗಳಲ್ಲಿ ಸರ್ವೇ ಸಾಮಾನ್ಯವಾಗಿ ಅರ್ಪಿಸುವ ಬಿಲ್ವಪತ್ರೆ ಎಲೆಯನ್ನು ಈ ರಾಜರಾಜೇಶ್ವರ ಮಂದಿರಲ್ಲಿ ಬಳಸುತ್ತಿಲ್ಲ. ಇದರ ಸ್ಥಾನದಲ್ಲಿ ತುಳಸಿ ದಳವನ್ನು ಅರ್ಪಿಸಲಾಗುತ್ತಿದೆ. ಇತರ ಮಂದಿರಗಳಲ್ಲಿರುವಂತೆ ಧಾರಾಕಾರವಾಗಿ ಬೀಳುವ ಅಭಿಷೇಕ ಪದ್ಧತಿ ಬದಲಾಗಿ ದೇವಸ್ಥಾನದ ಪವಿತ್ರ ಪುಷ್ಕರಣಿಯಿಂದ ವಿಧಿವತ್ತವಾಗಿ ತರುವ ಜಲದಿಂದ ಅಭಿಷೇಕ ಮಾಡಲಾಗುತ್ತದೆ. ರಾಜರಾಜೇಶ್ವರ ಮಂದಿರದಲ್ಲಿ ಪ್ರತೀವರ್ಷ ಶಿವರಾತ್ರಿ ಹಾಗೂ ವಿಶು ಹಬ್ಬದಂದು ತರುಚಾಂಬರಮ್‌ನಲ್ಲಿರುವ ಶ್ರೀ ಕೃಷ್ಣ ದೇವಸ್ಥಾನದಿಂದ ಉತ್ಸವ ಮೂರ್ತಿಯನ್ನು ಸಕಲ ಸನ್ಮಾನದೊಂದಿಗೆ ಇಲ್ಲಿಗೆ ತಂದು ಆರಾಧಿಸಲಾಗುತ್ತದೆ.

ಶ್ರೀ ರಾಜರಾಜೇಶ್ವರ ದೇವಸ್ಥಾನದ ನಿರ್ಮಾಣ ಯಾವ ಕಾಲದಲ್ಲಿ ಆಗಿತ್ತೆಂದು ನಿಖರವಾದ ದಾಖಲೆ ಇರುವುದಿಲ್ಲ. ಇದು ಕಾಲಾತೀತವಾಗಿ ನಾಲ್ಕು ಯುಗಗಳ ಮೊದಲೇ ಅಸ್ತಿತ್ವದಲ್ಲಿತ್ತೆಂದು ಊಹಿಸಬಹುದಾಗಿದೆ. ಶ್ರೀ ರಾಮಚಂದ್ರ ರಾವಣನನ್ನು ಸಂಹರಿಸಿ ವಿಭೀಷಣನಿಗೆ ಪಟ್ಟಕಟ್ಟಿ ಅಯೋಧ್ಯೆಗೆ ಮರಳಿ ಹೋಗುತ್ತಿರುವ ಸಂದರ್ಭದಲ್ಲಿ ಈ ದೇವಾಲಯಕ್ಕೆ ಭೇಟಿ ನೀಡಿ ಜ್ಯೋತಿರ್ಲಿಂಗ ದರ್ಶನ ಮಾಡಿ ಮಂದಿರದಲ್ಲಿ ಸಾಷ್ಟಾಂಗ ನಮಸ್ಕಾರ ಮಾಡಿದ್ದರು. ಇದರಿಂದಾಗಿ ಈ ಮಂದಿರವನ್ನು ಸದಾಕಾಲ ಮುಚ್ಚಲಾಗಿದ್ದು ಶ್ರೀ ರಾಮ ಸಾಷ್ಟಾಂಗ ನಮಸ್ಕಾರ ಮಾಡಿದ ನಂತರ ಯಾರೂ ಈ ಮಂದಿರದಲ್ಲಿ ನಮಸ್ಕಾರ ಮಾಡಲು ಅವಕಾಶವಿಲ್ಲ. ಇಲ್ಲಿಯ ಪುರಾಣೇತಿಹಾಸ, ಸ್ಥಳಪುರಾಣ ಅಪಾರ ಆಧ್ಯಾತ್ಮಿಕತೆ ಮತ್ತು ವಿಶಿಷ್ಟ ಶಕ್ತಿ, ಇಲ್ಲಿಗೆ ಭೇಟಿ ನೀಡಿರುವ ಶ್ರೀ ರಾಮಚಂದ್ರ, ಪರಶುರಾಮ, ನಾರದರು, ಅಗಸ್ತ್ಯರು, ವಿಶ್ವಕರ್ಮ ಮೊದಲಾದವರಿಂದ ಪಾವನವಾಗಿದೆ.

ತಳಿಪರಂಬದ ಪುರಾಣೇತಿಹಾಸ, ಸ್ಥಳಮಹಿಮೆ, ದೇವ ದೇವತೆಯರು ದರ್ಶನ ನೀಡಿರುವ ಈ ಸ್ಥಳ ಅತ್ಯಂತ ಪವಿತ್ರವಾಗಿದೆ ಎಂದು ವಿಶಧೀಕರಿಸುತ್ತದೆ. ಇಲ್ಲಿಗೆ ಯುಗಾಂತರಗಳ ಹಿಂದೆ ಮಹಾತ್ಮರ ಪಾದಸ್ಪರ್ಶದಿಂದ ಈ ಧನ್ಯಭೂಮಿಯಲ್ಲಿ ಯಾವುದೋ ಅವ್ಯಕ್ತ ಶಕ್ತಿ ಇದೆ. ಈ ಶಕ್ತಿ ಆಧ್ಯಾತ್ಮಿಕ ಮತ್ತು ಲೌಕಿಕ ಮನುಷ್ಯರನ್ನು ಆಹ್ಲಾದಗೊಳಿಸಲು ಸಾಧ್ಯವಿದೆ. ಇಲ್ಲಿ ನೆಲೆಸಿರುವ ಜ್ಯೋತಿರ್ಲಿಂಗ ಅತೀವ ಶಕ್ತಿಯುತವಾಗಿದೆ, ಅತ್ಯಂತ ಪ್ರಖರವಾಗಿದೆ.

(ಸಂಘದ ಹಿರಿಯ ಸದಸ್ಯ ಶ್ರೀ ಹರಿಪ್ರಸಾದ್ ಶೆಟ್ಟಿಯವರು ಕುಟುಂಬ ಸಮೇತ ಈ ಪವಿತ್ರ ಮಂದಿರಕ್ಕೆ ಭೇಟಿ ನೀಡಿ ದರ್ಶನ ಪಡೆದು ಬರುವಾಗ ಮಂದಿರದ ಕುರಿತ ಆಂಗ್ಲಭಾಷೆಯ ಕಿರು ಪುಸ್ತಕ ತಂದು ಇದನ್ನು ಸ್ನೇಹಚಿಂತನದಲ್ಲಿ ಪ್ರಕಟಿಸಬೇಕೆಂದಿದ್ದರು.)

---

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

## ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿ

ಸೆಪ್ಟೆಂಬರ್ ತಿಂಗಳಲ್ಲಿ ಮಂಜೂರಾದ ವಿದ್ಯಾರ್ಥಿವೇತನದ ವಿವರಗಳು

1. ವಿದ್ಯಾದೀವಿಗೆ– 32 ವಿದ್ಯಾರ್ಥಿಗಳು – ರೂ. 2,06,000/–
2. ಬಡ್ಡಿ ರಹಿತ ಸಾಲ ರೂಪದ ವಿದ್ಯಾರ್ಥಿವೇತನ – 14 ವಿದ್ಯಾರ್ಥಿಗಳು – ರೂ. 1,10,000/–
3. ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಸಹಾಯಧನ – 6 ವಿದ್ಯಾರ್ಥಿಗಳು– ರೂ. 35,000/–

ಒಟ್ಟು : 3,51,000/–

**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ಅಜಿತ್ ಶೆಟ್ಟಿ**
ಸಂಚಾಲಕರು

ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿ

**ಸದಾನಂದ ಸುಲಾಯ**
ಚೇರ್‌ಪರ್ಸನ್

**ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿ ಸದಸ್ಯರು**

# ಬಂಟರ ಸಂಘ ಬೆಂಗಳೂರು

## 2022–24ನೇ ಸಾಲಿನ ನಾಮನಿರ್ದೇಶಿತ ಕಾರ್ಯಕಾರಿ ಸಮಿತಿ ಸದಸ್ಯರು



ಶ್ರೀ ಜಗನ್ನಾಥ ಶೆಟ್ಟಿ ಹೆಚ್.



ಶ್ರೀಮತಿ ಮಂಜುಳಾ ಶೆಟ್ಟಿ



ಶ್ರೀ ಪ್ರವೀಣ್‌ಚಂದ್ರ ಶೆಟ್ಟಿ



# ಶ್ರದ್ಧಾಂಜಲಿ



**ಶ್ರೀಮತಿ ಲಲಿತ ಜೆ. ಚೌಟ**
ಸದಸ್ಯತ್ವ ಸಂಖ್ಯೆ : CL001658

ಕಾಪು ಶ್ರೀಮತಿ ಲಲಿತ ಜೆ. ಚೌಟರವರು ದಿನಾಂಕ 28.09.2022ರಂದು ತಮ್ಮ 76ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತಿ ಮುಲ್ಕಿ ಶ್ರೀ ಜಯ ಚೌಟ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಓರ್ವ ಸಹೋದರಿ ಹಾಗೂ ಬಂಧು-ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



**ಶ್ರೀ ಶೀನ ಶೆಟ್ಟಿ ಕೆ. ಗಮಿ**
ಸದಸ್ಯತ್ವ ಸಂಖ್ಯೆ : LM002700

ಗಮಿ ಶ್ರೀ ಕೆ. ಶೀನ ಶೆಟ್ಟಿಯವರು ದಿನಾಂಕ 25.10.2022ರಂದು ತಮ್ಮ 85ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತ್ನಿ ಮೊಡಪ್ಪಾಡಿ ಗುತ್ತು ಶ್ರೀಮತಿ ಸೀತಾ ಶೆಟ್ಟಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಮೂವರು ಮೊಮ್ಮಕ್ಕಳು, ಓರ್ವ ಸಹೋದರ, ಇಬ್ಬರು ಸಹೋದ-ರಿಯರು ಹಾಗೂ ಬಂಧು-ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



**ಶ್ರೀಮತಿ ಸುಜಾತ ಜೆ. ಶೆಟ್ಟಿ**
ಸದಸ್ಯತ್ವ ಸಂಖ್ಯೆ : CL002230

ಬಾಕ್ರಬೈಲ್ ಶ್ರೀ ಭುಜಂಗ ಹೆಗ್ಡೆ ಮತ್ತು ಬೋಳ ಮರಿಮಾರುಗುತ್ತು ಶ್ರೀಮತಿ ಪದ್ಮಾವತಿ ಹೆಗ್ಗಡ್ತಿಯವರ ಪುತ್ರಿ ಶ್ರೀಮತಿ ಸುಜಾತ ಜೆ. ಶೆಟ್ಟಿಯವರು ದಿನಾಂಕ 31.10.2022ರಂದು ತಮ್ಮ 75ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತಿ ಆಜ್ರಿ ದೊಡ್ಡಮನೆ ಡಾ. ಜಯಪ್ರಸಾದ್ ಶೆಟ್ಟಿ, ಓರ್ವ ಪುತ್ರಿ, ಮೊಮ್ಮಕ್ಕಳು, ಆರು ಜನ ಸಹೋದರರು, ನಾಲ್ವರು ಸಹೋದರಿಯರು ಹಾಗೂ ಬಂಧು-ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.




**ಇರ್ಮಾಡಿ ಶ್ರೀಮತಿ ಪ್ರೇಮಾ ಎಂ. ಮಲ್ಲಿ**
ಸದಸ್ಯತ್ವ ಸಂಖ್ಯೆ: CL003019

ಕೆಲರ್ೈ ದಿ. ಕೆ. ಮಹಾಬಲ ಮಲ್ಲಿಯವರ ಪತ್ನಿ ಇರ್ಮಾಡಿ ಶ್ರೀಮತಿ ಪ್ರೇಮಾ ಎಂ. ಮಲ್ಲಿಯವರು ದಿನಾಂಕ 04.11.2022ರಂದು ತಮ್ಮ 89ನೇ ವಯಸ್ಸಿನಲ್ಲಿ ನಿಧನರಾದರು. ಇವರು ನಾಲ್ವರು ಪುತ್ರರು, ಮೂವರು ಪುತ್ರಿಯರು, ಮೊಮ್ಮಕ್ಕಳು, ಓರ್ವ ಸಹೋದರಿ ಹಾಗೂ ಬಂಧು-ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



**ಶ್ರೀ ಎಂ. ವಿಜಯ್ ರೈ**
ಸದಸ್ಯತ್ವ ಸಂಖ್ಯೆ: CL008540

ಪೆರಾರ ಮುಂಡಬೆಟ್ಟುಗುತ್ತು ಶ್ರೀ ಕೆ. ಗಂಗಾಧರ ರೈ ಮತ್ತು ಹರೇಕಳ ಮಣಿಬೆಟ್ಟುಗುತ್ತು ದಿ. ರಾಜೀವಿ ರೈಯವರ ಪುತ್ರ, ಅಡ್ವೆ ಶ್ರೀಮತಿ ಹೇಮಿಕಾ ವಿ. ರೈಯವರ ಪತಿ ಶ್ರೀ ವಿಜಯ್ ರೈಯವರು ದಿನಾಂಕ 04.11.2022ರಂದು ತಮ್ಮ 54ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಓರ್ವ ಸಹೋದರಿ, ಓರ್ವ ಸಹೋದರ ಹಾಗೂ ಬಂಧು-ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.




**From 5th Dec. to 11th December 2022**

**HIGHLIGHTS :** Shillong - Umiam Lake / Barapani Lake, Cheerapunji, Seven Sisters (Nohsngithiang) Falls and Nohkalikai Falls, Mawsmai Cave, Kaziranga National Park - Jeep safari in the Central Range with Kohora as the entry point. Guwahati - Kamakhya Temple, Navagraha temple (temple of nine planets), Assam State Museum.

**PACKAGE COST INR 61700/- PER PERSON - ALL INCLUSIVE - EX-MUMBAI**

INCLUSIONS : Cost of to & fro airfare to Guwahati & back, Accommodation on twin sharing basis for 6 Nights at 4* hotels • All transfer and sightseeing as per the itinerary by 2x2 AC mini couch • Breakfast & dinner at hotel, lunch at local restaurants, Jeep safari at Central range. EXCLUSIONS : • All expenses of personal nature.

For any further details please contact:

IATA Approved

Canara Tours & Travels Pvt. Ltd
....... GOOD PEOPLE TO TRAVEL WITH

**ASHA SHINDE - 9082333940** E-mail : asha@canaratravels.com
**Mr. T. T. Mada – 9820632934**
2, Srishti Complex, Opp. L & T Gate No.7, Saki Vihar Rd., Powai, Mumbai-72. **Tel. : (022) 42215000**
Website : www.canaratravels.com
**Mr. Varun Mallya - 9480744833**
G/3, Inland Ornate Opp. Ocean Pearl, Navabharath Circle, Kodialbail, Mangalore-575003 Tel.: 0824-4258505/06
**Mr. Prabhat Shetty - 9481950340** (Manipal)
**Mr. Suresh Ajila 09448089189** (Bangalore)

ADVT.

ಸ್ಥಾಪನೆ : 1997

# ವಿಜಯ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ

## Vijaya Pathina Souharda Sahakari Niyamitha

ನಂ. 5, ಎಸ್.ಜೆ. ಎಲಿಗೆನ್ಸ್, 4ನೇ ಮಹಡಿ, ಚಂದ್ರಲೇಔಟ್ ಮುಖ್ಯರಸ್ತೆ, ಇನ್‌ಕಮ್ ಟ್ಯಾಕ್ಸ್ ಲೇಔಟ್
ವಿಜಯನಗರ, ಬೆಂಗಳೂರು–560 040. ದೂರವಾಣಿ: 23393444 ಮೊಬೈಲ್ : 8722006082
E-mail: vijaya_souharda@yahoo.in, vijayasouharda@rediffmail.com

**ವಿಜಯ ಪತ್ತಿನ ಸೌಹಾರ್ದ ಸಹಕಾರಿ – ಪ್ರಗತಿ ಪಥದತ್ತ**

**ಸಹಕಾರಿಯು ಸುಸ್ಥಿರ ಬೆಳವಣಿಗೆಯತ್ತ ಸಾಗುತ್ತಿದೆ. 25ರ ರಜತ ಸಂಭ್ರಮಕ್ಕೆ ಕಾಲಿಡುತ್ತಿದೆ. ನಿಶ್ಚಿತ ಠೇವಣಿಗಳಿಗೆ ಆಕರ್ಷಕ ಬಡ್ಡಿದರವನ್ನು ನೀಡಲಾಗುವುದು. ಷೇರುಗಳನ್ನು ಖರೀದಿಸಿ ಸಹಕಾರಿಯ ಸದಸ್ಯರಾಗುವ ಮೂಲಕ ವಿವಿಧ ಠೇವಣಿ, ಸಾಲ ಸೌಲಭ್ಯವನ್ನು ಪಡೆದುಕೊಳ್ಳಬಹುದು. ಪಿಗ್ಮಿ ಸಂಗ್ರಹಣಾ ವ್ಯವಸ್ಥೆ ಕಲ್ಪಿಸಲಾಗಿದೆ. ಇವುಗಳ ಸದುಪಯೋಗವನ್ನು ಎಲ್ಲರೂ ಪಡೆದುಕೊಳ್ಳುವಂತೆ ಕೋರಲಾಗಿದೆ.**

**ಸಾಲಗಳು**

- ಜಾಮೀನು ಸಾಲ : ರೂ. 50,000/–
- ವಾಹನ ಸಾಲ : 1 ಲಕ್ಷದಿಂದ 10 ಲಕ್ಷ – 24 ತಿಂಗಳಿಂದ 36 ತಿಂಗಳವರೆಗೆ
- ವ್ಯಾಪಾರ ಸಾಲ : 1 ಲಕ್ಷದಿಂದ 20 ಲಕ್ಷ
- ಗೃಹ ನಿರ್ಮಾಣ ಸಾಲ : 1 ಲಕ್ಷದಿಂದ 20 ಲಕ್ಷ – 120 ತಿಂಗಳು

**ಸಾಲದ ಬಡ್ಡಿ ದರ : 1 ಲಕ್ಷದವರೆಗೆ 14%, 1 ಲಕ್ಷ ಮೇಲ್ಪಟ್ಟು – 13%**

**2016–17 ರಿಂದ ಕ್ರಮವಾಗಿ 15% ವಾರ್ಷಿಕ ಡಿವಿಡೆಂಡ್ ವಿತರಣೆ**

**ಪ್ರಗತಿಗೆ ಕೈ ಜೋಡಿಸಿ ಸಹಕಾರಿ ಕ್ಷೇತ್ರದಲ್ಲಿ ಅದ್ಭುತ ಸಾಧನೆಗೆ ಸಹಕರಿಸಿ**

**ವ್ಯವಹಾರದ ವೇಳೆ**

| | ಬೆಳಿಗ್ಗೆ | ಸಾಯಂಕಾಲ | ವಾರದ ರಜಾದಿನ |
|---|---|---|---|
| ಮಂಗಳವಾರದಿಂದ ಶನಿವಾರದವರೆಗೆ | 9.30 ರಿಂದ 1.00 | 2.00 ರಿಂದ 6.00 | ಸೋಮವಾರ |
| ಭಾನುವಾರ | 9.30 ರಿಂದ 1.00 | ರಜಾ | |

**ನಿರ್ದೇಶಕರುಗಳು :**

ಶ್ರೀ ಕೆ. ಭಗವಾನ್ ದಾಸ್ ರೈ
ಶ್ರೀ ಹರಿಪ್ರಸಾದ್ ಎಸ್. ಶೆಟ್ಟಿ
ಶ್ರೀ ಬಿ. ಸಂತೋಷ್‌ಕುಮಾರ್ ಶೆಟ್ಟಿ
ಶ್ರೀ ಚಂದ್ರಹಾಸ್ ರೈ. ಡಿ
ಶ್ರೀ ಕೆ. ಪ್ರಮೋದ್‌ಚಂದ್ರ ಭಂಡಾರಿ
ಶ್ರೀಮತಿ ಮಂಜುಳಾ ಎಸ್. ಶೆಟ್ಟಿ
ಶ್ರೀಮತಿ ಸರ್ವಾಣಿ ಜಿ. ರೈ

ಸ್ಥಾಪಕ ಅಧ್ಯಕ್ಷರು : ದಿ|| ಡಾ|| ಐ.ವಿ. ಶೆಟ್ಟಿ – 1997
ಶ್ರೀ ಕೆ.ಆರ್. ಶೇಷಾದ್ರಿ – ಕಾರ್ಯದರ್ಶಿ

**ಶ್ರೀ ಇರ್ಮಾಡಿ ಜಯಪ್ರಸಾದ್ ಶೆಟ್ಟಿ**
ಅಧ್ಯಕ್ಷರು

**ಶ್ರೀ ಹೆಚ್. ಶ್ರೀಧರ್ ಹೆಗ್ಡೆ**
ಉಪಾಧ್ಯಕ್ಷರು

ADVT.

# ದೀಪಾವಳಿ ಸಂಭ್ರಮ–2022







ಶ್ರೀ ಬಿ. ಅಪ್ಪಣ್ಣ ಹೆಗ್ಡೆಯವರಿಗೆ
"ದಿ. ಶ್ರೀ ಕೆ. ಶ್ರೀನಿವಾಸ ಆಳ್ವ ಸ್ಮಾರಕ
ಸಾಮಾಜಿಕ ಸೇವಾ ಪ್ರಶಸ್ತಿ"

ಮುಖ್ಯ ಅತಿಥಿ
ಶ್ರೀ ಎನ್. ವಿನಯ್ ಹೆಗ್ಡೆಯವರಿಗೆ
ಗೌರವಾರ್ಪಣೆ







ಗೌರವ ಅತಿಥಿ
ಶ್ರೀ ಶ್ರೀಕಾಂತ್ ಬಿ. ಶೆಟ್ಟಿಯವರಿಗೆ
ಗೌರವಾರ್ಪಣೆ

ನಿಕಟಪೂರ್ವ ಅಧ್ಯಕ್ಷರಾದ
ಶ್ರೀ ಆರ್. ಉಪೇಂದ್ರ ಶೆಟ್ಟಿಯವರಿಗೆ
ಗೌರವಾರ್ಪಣೆ



REGISTERED KA/BGW-1589/2021-2023 RNI NO : KARBIL/2005/16402, Date of Publication 07-11-2022.
Licenced post without prepayment License No. PMG BG /WPP-219/2021-2023, Total No. of Pages 40+4=44
Licensed to post at Bengaluru PSO, Mysore Road, Bengaluru - 560026, on 10th or 12th of every Month




Printed and Published by : Sri Anandram Shetty B. on behalf of Bunts' Sangha Bangalore.
# 324, Bunts' Sangha Complex, Chord Road, Vijayanagar, Bengaluru - 560040. Editor : Aravind Shetty M.
Printed at Poornima Printers, # 3 & 4, Sy. No. 51 / 14, Chowdeshwarinagar, Pipe Line Road, Laggere,
Bengaluru - 560 058. Phone : 080 - 23359588 | 23351210.